# ನಗರಸಭಾ ಕಾರ್ಯಾಲಯ, ಮಂಡ್ಯ.

**ಸಂಖ್ಯೆ:ನಸಮಂ/ಸಭೆ/4/2008–09.** **ದಿನಾಂಕ:25–8–2008.**

## ಸಾಮಾನ್ಯ ಸಭೆ

ದಿನಾಂಕ:25–8–2008ನೇ ಸೋಮವಾರ ಬೆಳಿಗ್ಗೆ 10–30 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆ ಸಾಮಾನ್ಯ ಸಭೆ ನಡವಳಿಕೆಗಳು.

ಹಾಜರಿ: 33 +2 ಗೈರುಹಾಜರಿ:1 ಖಾಲಿ:1 ಒಟ್ಟು 35

**ವಿಷಯ:1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:1:**–ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್ ರವರು, ಶ್ರೀ.ಕೆ.ಎಲ್.ನಾಗೇಂದ್ರರವರು, ಶ್ರೀ.ಶಂಕರೇಗೌಡರವರು, ಶ್ರೀ.ಟಿ.ಎನ್.ಶಂಕರೇಗೌಡವರು, ಮಾತನಾಡಿ ಕಳೆದ ಸಭೆಯಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ.ಬಿ.ಎಸ್.ಯಡಿಯೂರಪ್ಪರವರಿಗೆ ಪೌರಸನ್ಮಾನ ಮಾಡುವ ಬಗ್ಗೆ ಚರ್ಚಿಸಿ ಮಾನ್ಯ ಮುಖ್ಯ ಮಂತ್ರಿಯವರನ್ನು ಅಬಿನಂಧಿಸಿ ಪೌರ ಸನ್ಮಾನ ಮಾಡುವ ದಿನಾಂಕ ನಿಗಧಿಪಡಿಸಿಕೊಳ್ಳಲು ಅವರನ್ನು ಭೇಟಿ ಮಾಡಲು ದಿನಾಂಕವನ್ನು ನಿಗಧಿಪಡಿಸುವಂತೆ ಮಾನ್ಯ ಶಾಸಕರ ಸಮಕ್ಷಮದಲ್ಲಿ ಚರ್ಚಿಸಿ ತೀರ್ಮಾನಿಸಲಾಗಿತ್ತು . ಆದರೆ ಇದುವರೆವಿಗೂ ಈ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ತಿಳಿಸಿದರು.

ನಂತರ ಅಧ್ಯಕ್ಷರು ಮಾತನಾಡಿ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಲು ದಿನಾಂಕವನ್ನು ಗೊತ್ತುಪಡಿಸುತ್ತೇನೆಂದು ಸಭೆಗೆ ತಿಳಿಸಿದರು.

ದಿನಾಂಕ:19–7–2008ರ ಸಾಮಾನ್ಯ ಸಭೆ ವಿಷಯ 22ರಲ್ಲಿ ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಾರ್ಡ್‌ವಾರು 10.00ಲಕ್ಷ ರೂಪಾಯಿಗಳನ್ನು ನಗರಸಭಾ ನಿಧಿಯಿಂದ ಮಂಜೂರು ಮಾಡಲಾಗಿದ್ದು, ಈ ಕೆಳಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ತುರ್ತಾಗಿ ಟೆಂಡರ್ ಕರೆದು ಈ ಕಾಮಗಾರಿಗಳನ್ನು ನಿರ್ವಹಿಸುವುದೆಂದು ಸರ್ವಾನುಮತದಿಂದ ಒಪ್ಪಲಾಯಿತು.

ದಿನಾಂಕ:19–7–2008ರ ವಿಷಯ:34ರಲ್ಲಿ ಮೈಸೂರು–ಬೆಂಗಳೂರು ರಸ್ತೆ ಹೆಬ್ಬಾಳದಿಂದ ಸ್ವರ್ಣಸಂದ್ರದವರೆಗೆ ಟ್ಯೂಬಿಲರ್ ಪೋಲ್ ಬೀದಿ ದೀಪ ಅಳವಡಿಸುವುದು ಅಂದಾಜು ಮೊತ್ತ ರೂ.10.00ಲಕ್ಷ, ಮತ್ತು ಕಲ್ಲಹಳ್ಳಿಯಿಂದ ಕಿರಗಂದೂರು ರಸ್ತೆವರೆಗೆ ಟ್ಯೂಬಿಲರ್ ಪೋಲ್ ಬೀದಿ ದೀಪ ಅಳವಡಿಸುವುದು ಅಂದಾಜು ಮೊತ್ತ ರೂ.10.00ಲಕ್ಷಗಳ ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಯಿತು ಹಾಗೂ ಕಾಮಗಾರಿಗಳನ್ನು ನಿರ್ವಹಿಸಲು ತೀರ್ಮಾನಿಸಲಾಯಿತು.

ಹಿಂದಿನ ಸಭೆ ವಿಷಯ ಸಂಖ್ಯೆ:15 ದಿನಂಕ:19–7–2008ರ ಸಾಮಾನ್ಯ ಸಭೆಯಲ್ಲಿ ನೈರ್ಮಲ್ಯ ವಿಭಾಗಕ್ಕೆ ಬೇಕಾದ ಕಂಟೈನರ್‌ಗಳನ್ನು ಖರೀದಿಸುವ ಬಗ್ಗೆ ಅವಶ್ಯಕತೆಗೆ ಅನುಗುಣವಾಗಿ ನಿಯಮಾನುಸಾರ ಖರೀದಿಸುವಂತೆ ತೀರ್ಮಾನಿಸಲಾಗಿತ್ತು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಮಂಡ್ಯ ನಗರ ವ್ಯಾಪ್ತಿಯ ಬಡಾವಣೆಗಳು ವಿಸ್ತಾರವಾಗಿರುವುದರಿಂದ ಈ ಹಿಂದೆ ವಾರ್ಡ್‌ಗೆ ಒಂದರೆಂತೆ ಅಂದರೆ 23 ಸಂಖ್ಯೆಯ 3.0ಘನ ಮೀಟರ್ ಹಾಗೂ 23 ಸಂಖ್ಯೆಯ 4.5 ಘನಮೀಟರ್ ಉಳ್ಳ ಕಂಟೇನರ್‌ಗಳನ್ನು ಸರ್ಕಾರದ ಆದೇಶದಂತೆ ಖರೀದಿಸಿ ಉಪಯೋಗಿಸಲಾಗುತ್ತಿದೆ. ನಗರಸಭೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸುಲಭವಾಗಿ ಮತ್ತು ತ್ವರಿತವಾಗಿ ಸಂಗ್ರಹಿಸಿ ಸಾಗಾಣಿಕೆ ಮಾಡಲು ಹೆಚ್ಚುವರಿಯಾಗಿ ಪ್ರತಿ ವಾರ್ಡ್‌ಗೆ 3.0ಘನಮೀಟರ್ ಮತ್ತು 4.5ಘನಮೀಟರ್‌ವುಳ್ಳ ಕಂಟೇನರ್‌ಗಳನ್ನು ಖರೀದಿಸಬಹುದೆಂದು ತಿದ್ದುಪಡಿ ಮಾಡಿಕೊಳ್ಳಲು ಒಪ್ಪಲಾಯಿತು.

ನಗರಸಭಾ ನಿಧಿಯಿಂದ ಕೈಗೊಳ್ಳುವ ಸಿವಿಲ್ ಹಾಗೂ ಇತರೆ ಕಾಮಗಾರಿಗಳು, ಬೀದಿ ದೀಪ ಕಾಮಗಾರಿಗಳು ಮತ್ತು ಮುಕ್ತ ನಿಧಿ (ಟಿ.ಎಫ್.ಸಿ.)ಯಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ಕೈಗೊಳ್ಳುವ ಟ್ಯೂಬಿಲರ್ ಪೋಲ್ ಬೀದಿ ದೀಪ ಕಾಮಗಾರಿಗಳ ಟೆಂಡರ್‌ಗಳನ್ನು ಅನುಮೋದಿಸುವ ಅಧಿಕಾರವನ್ನು ಮಾನ್ಯ ಅಧ್ಯಕ್ಷರಿಗೆ ನೀಡುವುದೆಂದು ಮಾನ್ಯ ಸದಸ್ಯರುಗಳಾದ ಶ್ರೀ.ಕೆ.ಎಲ್.ನಾಗೇಂದ್ರ ಮತ್ತು ಶ್ರೀ.ಶಂಕರೇಗೌಡರವರು ಸಭೆಯಲ್ಲಿ ಸೂಚಿಸಿದರು. ಸದರಿಯವರ ಸೂಚನೆಯನ್ನು ಸಭೆಯಲ್ಲಿ ಒಪ್ಪಿ ಟೆಂಡರನ್ನು ಅನುಮೋದಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

–2–

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ( ರೂ.ಲಕ್ಷಗಳಲ್ಲಿ) |
|---|---|---|---|
| 1 | 2 | 3 | 4 |
| 1 | 1 | ಜಬ್ಬಾರ್ ಸರ್ಕಲ್‌ನಿಂದ ನಾಲಬಂದವಾಡಿಯ ರಸ್ತೆಯವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ | 8.00 |
| 2 | 1 | ವಾರ್ಡ್ ನಂಬರ್:1ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 3 | 2 | ಕಾಳಿಕಾಂಭ ನಿವೇಶನದ ಪಕ್ಕ ಆರ್.ಸಿ.ಸಿ.ಚರಂಡಿ ನಿರ್ಮಾಣ ಹಾಗೂ ಶ್ರೀ.ಲಕ್ಷ್ಮಿ ಜನಾರ್ಧನ ದೇವಸ್ಥಾನದ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 4 | 2 | ವಾರ್ಡ್ ನಂಬರ್:2ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 4.00 |
| 5 | 3 | ಹಳೇ ಎಂ.ಸಿ.ರಸ್ತೆ ದಕ್ಷಿಣಕ್ಕೆ ಆರ್.ಸಿ.ಸಿ.ಚರಂಡಿ ನಿರ್ಮಿಸಿ ಸ್ಲ್ಯಾಬ್ ಕವರ್ ಮಾಡುವುದು ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ, ಸಿಹಿನೀರು ಕೊಳದ ಪ್ರದೇಶದಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ ಮತ್ತು ಬಂದೀಗೌಡ ಬಡಾವಣೆಯಲ್ಲಿ ಎಸ್.ಬಿ.ಎಂ.ರಸ್ತೆಯಲ್ಲಿ ರೈಲ್ವೆ ಲೈನ್ ಪಕ್ಕದವರೆಗೆ ಚರಂಡಿ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ, ಮುತೀಫ್ ಮನೆ ಮುಂಭಾಗಕ ಚರಂಡಿ ನಿರ್ಮಾಣ. | 8.00 |
| 6 | 3 | ವಾರ್ಡ್ ನಂಬರ್:3ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 7 | 4 | ಶಂಕರಮಠದಲ್ಲಿ ಆರ್.ಸಿ.ಸಿ. ಚರಂಡಿ ನಿರ್ಮಾಣ . | 8.00 |
| 8 | 4 | ವಾರ್ಡ್ ನಂಬರ್:4ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 9 | 5 | ಕಲ್ಲಹಳ್ಳಿ ಸ್ಮಶಾನದ ಅಭಿವೃದ್ಧಿ. | 5.00 |
| 10 | 5 | ವಾರ್ಡ್ ನಂಬರ್:4ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 5.00 |
| 11 | 6 | ಕಲ್ಲಹಳ್ಳಿ ರಾಜಾಚಾರಿ ಮನೆಯಿಮದ ಹಳೇ ಎಂ.ಸಿ.ರಸ್ತೆಯವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ. | 7.20 |
| 12 | 6 | ವಾರ್ಡ್ ನಂಬರ್:4ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 13 | 6 | ಕಲ್ಲಹಳ್ಳಿ ದೇವಸ್ಥಾನದ ಮುಂಭಾಗ ಬೋರ್ ಕೊರೆದು ವಿದ್ಯುತ್ ಚಾಲಿತ ಪಂಪ್ ಅಳವಡಿಸುವುದು. | 0.80 |
| 14 | 7 | ವಿ.ವಿ.ನಗರ ಎ.ಪಿ.ಎಂ.ಸಿ.ರಸ್ತೆ ಪಶ್ಚಿಮ ಭಾಗದ ರಸ್ತೆ ಹಾಗೂ ಆತ್ರೇಯ ಶಾಲೆ ರಸ್ತೆ ಪಶ್ಚಿಮ ಭಾಗದ ರಸ್ತೆಗಳ ಅಭಿವೃದ್ಧಿ. | 5.00 |
| 15 | 7 | ವಾರ್ಡ್ ನಂಬರ್:7ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 5.00 |
| 16 | 8 | ಬನ್ನೂರು ರಸ್ತೆ ಪೂರ್ವ ಭಾಗದ ಚಾಮುಂಡೇಶ್ವರಿ ನಗರ (ಕಾಲುವೆ ಪಕ್ಕ) ರಸ್ತೆಗಳ ಅಭಿವೃದ್ಧಿ. | 8.00 |
| 17 | 8 | ವಾರ್ಡ್ ನಂಬರ್:8ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 18 | 9 | ಚಾಮುಂಡೇಶ್ವರಿ ದೇವಸ್ಥಾನದ ದಕ್ಷಿಣ ಭಾಗದ ರಸ್ತೆಗಳ ಅಭಿವೃದ್ಧಿ ಹಾಗೂ ಪೋಲೀಸ್ ವಸತಿ ಗೃಹದ ಆವರಣದಲ್ಲಿ ರಸ್ತೆ ಅಭಿವೃದ್ಧಿ. | 8.00 |
| 19 | 9 | ವಾರ್ಡ್ ನಂಬರ್:9ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 20 | 10 | ಕ್ರಿಶ್ಚಿಯನ್ ಕಾಲೋನಿ 2ನೇ ಮತ್ತು 4ನೇ ಕ್ರಾಸ್ ರಸ್ತೆಗಳಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 8.00 |
| 21 | 10 | ವಾರ್ಡ್ ನಂಬರ್:10ರ ಸುಭಾಷ್ ನಗರದ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 22 | 11 | ಗಾಂಧಿನಗರ 2ನೇ ಕ್ರಾಸ್ ಸರ್ಕಾರಿ ಶಾಲೆಯಿಂದ ಸೌದೆ ಟಿಪ್ಪೋ ನರಸಪ್ಪರವರ ಮನೆಯವರೆಗೆ ಮೆಟಲಿಂಗ್ ಕಾಮಗಾರಿ. | 5.00 |

–3–

| 1 | 2 | 3 | 4 |
|---|---|---|---|
| 23 | 11 | ಗಾಂಧಿನಗರ 1ನೇ ಕ್ರಾಸ್ ಕೆ.ಎಂ.ಕೆ.ಟ್ರೇಡರ್ಸ್ ರವರ ಮನೆಯಿಂದ ಪಿ.ಅಂಡ್ ಟಿ.ಶೇಖರ್‌ರವರ ಮನೆಯವರೆಗೆ ಡಾಂಬರೀಕರಣ | 3.00 |
| 24 | 11 | ಪುಟ್ಟಾಚಾರ್ ಮನೆಯಿಂದ ಹನಿಯಂಬಾಡಿ ರಸ್ತೆಯವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ | 2.00 |
| 25 | 12 | ಗಾಂಧಿನಗರ 4ನೇ ಕ್ರಾಸ್‌ನಿಂದ ಸಂಪತ್ ಕುಮಾರ್ ಮನೆಯವರೆಗೆ ಹಾಗೂ ಪೂರ್ವಕ್ಕೆ ರಸ್ತೆ ಕೊನೆಯವರೆಗೆ ಚರಂಡಿ ನಿರ್ಮಾಣ ಹಾಗೂ 5ನೇ ಕ್ರಾಸ್ ರಸ್ತೆ ಅಭಿವೃದ್ಧಿ. | 8.00 |
| 26 | 12 | ವಾರ್ಡ್ ನಂಬರ್:12ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 27 | 13 | ಗಾಂಧಿನಗರದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡ್ರೈನ್ ಮತ್ತು ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ. | 8.00 |
| 28 | 13 | ವಾರ್ಡ್ ನಂಬರ್:13ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 29 | 14 | ಚಾಮುಂಡೇಶ್ವರಿ ನಗರದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಆರ್.ಸಿ.ಸಿ.ಡ್ರೈನ್ ನಿರ್ಮಾಣ ಕಾಮಗಾರಿ | 8.00 |
| 30 | 14 | ವಾರ್ಡ್ ನಂ.14ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 31 | 15 | ಕುವೆಂಪುನಗರ ಹಾಗೂ ಶಂಕರನಗರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ | 8.00 |
| 32 | 15 | ವಾರ್ಡ್ ನಂ.15ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 33 | | ಶಂಕರನಗರ ಮತ್ತು ಕುವೆಂಪುನಗರ ಕೂಡು ರಸ್ತೆಯ ಅಭಿವೃದ್ಧಿ ಮತ್ತು ಡ್ರೈನ್ ಕಾಮಗಾರಿ (ಮಾನ್ಯ ಶಾಸಕರು ಸೂಚಿಸಿರುವ ಕಾಮಗಾರಿ). | 10.00 |
| 34 | 16 | ಹೊಸಹಳ್ಳಿ ಮತ್ತು ಕಾವೇರಿ ನಗರದಲ್ಲಿ ರಸ್ತೆ ಅಭಿವೃದ್ಧ ಮತ್ತು ಡೆಕ್ ನಿರ್ಮಾಣ ಕಾಮಗಾರಿ. | 8.00 |
| 35 | 16 | ವಾರ್ಡ್ ನಂ.16ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 36 | 17 | ಹೊಸಹಳ್ಳಿ ಮತ್ತು ಕೆ.ಹೆಚ್.ಬಿ.ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡ್ರೈನ್ ನಿರ್ಮಾಣ. | 8.00 |
| 37 | 17 | ವಾರ್ಡ್ ನಂ.17ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 38 | 18 | ಗಾಂಧಿನಗರ 7ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ.ಡ್ರೈನ್ ಕಾಮಗಾರಿ. | 9.00 |
| 39 | 18 | ವಾರ್ಡ್ ನಂ.18ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 40 | 19 | ವಾರ್ಡ್ ನಂ.19ರಲ್ಲಿ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡ್ರೈನ್ ಮತ್ತು ಡೆಕ್ ಕಾಮಗಾರಿ. | 8.00 |
| 41 | 19 | ವಾರ್ಡ್ ನಂ.19ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 42 | 20 | ಹೊಸಹಳ್ಳಿ, ಹಾಲಹಳ್ಳಿ ಮತ್ತು ಶಿವನಂಜಪ್ಪ ಲೇಔಟ್‌ನಲ್ಲಿ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ . ಡ್ರೈನ್ ಕಾಮಗಾರಿ. | 9.00 |
| 43 | 20 | ವಾರ್ಡ್ ನಂ.20ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 44 | 21 | ಹಾಲಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡೆಕ್ ಕಾಮಗಾರಿ | 8.00 |
| 45 | 21 | ವಾರ್ಡ್ ನಂ.21ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 46 | 22 | ವಾರ್ಡ್ ನಂ.22ರಲ್ಲಿ ಆರ್.ಸಿ.ಸಿ.ಡ್ರೈನ್ ಕಾಮಗಾರಿ. | 9.00 |
| 47 | 22 | ವಾರ್ಡ್ ನಂ.22ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 48 | 23 | ವಾರ್ಡ್ ನಂ.23ರಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡೆಕ್ ಕಾಮಗಾರಿ. | 9.00 |

| 1 | 2 | 3 | 4 |
|---|---|---|---|
| 49 | 23 | ವಾರ್ಡ್ ನಂ.23ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 50 | 24 | ತಮಿಳು ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ | 8.00 |
| 51 | 24 | ವಾರ್ಡ್ ನಂ.24ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 52 | 25 | ಕಿರು ನೀರು ತೊಂಬೆ ಹಾಗೂ ಡ್ರೈನ್ ಕಾಮಗಾರಿ. | 8.00 |
| 53 | 25 | ವಾರ್ಡ್ ನಂ.25ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 2.00 |
| 54 | 26 | ಗುತ್ತಲು ಕಾಲೋನಿಯಲ್ಲಿ ಆರ್.ಸಿ.ಸಿ.ಡ್ರೈನ್ ಕಾಮಗಾರಿ. | 9.50 |
| 55 | 26 | ವಾರ್ಡ್ ನಂ.26ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 0.50 |
| 56 | 27 | ತಾವರೆಗೆರೆಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಡ್ರೈನ್ ಕಾಮಗಾರಿ.<br>ತಾವರೆಗೆರೆ 1ಎ ಅಡ್ಡ ರಸ್ತೆಯಲ್ಲಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ. | 8.53<br>0.47 |
| 57 | 27 | ವಾರ್ಡ್ ನಂ.27ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 58 | 28 | ಗುತ್ತಲು ಕಾಲೋನಿ 3,4 ಮತ್ತು 5ನೇ ಕ್ರಾಸ್‌ಗಳಲ್ಲಿ ಡೆಕ್ ಸ್ಲ್ಯಾಬ್ ನಿರ್ಮಾಣ. | 6.00 |
| 59 | 28 | ಗುತ್ತಲು ಕಾಲೋನಿಯ 7ನೇ ಅಡ್ಡ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. | 3.00 |
| 60 | 28 | ವಾರ್ಡ್ ನಂ.28ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 61 | 29 | ಗುತ್ತಲು ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡೆಕ್ ನಿರ್ಮಾಣ. | 9.00 |
| 62 | 29 | ವಾರ್ಡ್ ನಂ.29ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು. | 1.00 |
| 63 | 30 | ಗುತ್ತಲು ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡ್ರೈನ್ ಕಾಮಗಾರಿ. | 7.00 |
| 64 | 30 | ವಾರ್ಡ್ ನಂ.30ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 3.00 |
| 65 | 31 | ವಾರ್ಡ್ ನಂ.31ರ ಆಯ್ದ ರಸ್ತೆಗಳಲ್ಲಿ ಚರಂಡಿ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ. | 8.00 |
| 66 | 31 | ವಾರ್ಡ್ ನಂ.31ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 2.00 |
| 67 | 32 | ವಾರ್ಡ್ ನಂ.32ರ 2,3 ಮತ್ತು 6ನೇ ಅಡ್ಡ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. ಹಾಗೂ ಸಾದತ್ ನಗರದಲ್ಲಿ ಚರಂಡಿ ಮೇಲ್ಭಾಗ ಸ್ಲ್ಯಾಬ್ ನಿರ್ಮಾಣ | 8.00 |
| 68 | 32 | ವಾರ್ಡ್ ನಂ.32ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 2.00 |
| 69 | 33 | ಸ್ವರ್ಣಸಂದ್ರದ ಪಾರ್ಕ್ ಸುತ್ತ ಕಾಂಪೌಂಡ್ ನಿರ್ಮಾಣ ಕಾಮಗಾರಿ. | 9.00 |
| 70 | 33 | ವಾರ್ಡ್ ನಂ.33ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 1.00 |
| 71 | 34 | ವಾರ್ಡ್ ನಂಬರ್:34ರಲ್ಲಿ ಕೋಳಿ ಅಂಗಡಿ ಪುಟ್ಟಸ್ವಾಮಿ ಮನೆ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ನಾಗರಾಜು ಮನೆ ರಸ್ತೆಯಲ್ಲಿ ಚರಂಡಿ ನಿರ್ಮಾಣ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ. | 6.00 |
| 72 | 34 | ವಾರ್ಡ್ ನಂಬರ್:34ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 4.00 |
| 73 | 35 | ವಾರ್ಡ್ ನಂಬರ್:35ರಲ್ಲಿ ದೇವೇಗೌಡನದೊಡ್ಡಿ ಶಿವಣ್ಣರವರ ಮನೆಯಿಂದ ಬಿ.ಸಿ.ಎಂ. ದೇವಣ್ಣರವರ ಮನೆವರೆಗೆ , ಶಂಕರೇಗೌಡರ ಮನೆಯಿಂದ ಸಿದ್ದರಾಮಯ್ಯರವರ ಮನೆಯವರೆಗೆ ಮತ್ತು ಆನಂದ ಹಾಗೂ ಸಿದ್ದರಾಮುರವರ ಮನೆ ಮುಂಭಾಗ ಆರ್.ಸಿ.ಸಿ. ಚರಂಡಿ ನಿರ್ಮಾಣ ಹಾಗೂ ಡೆಕ್ ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ | 5.00 |
| | | ಆನಂದ ಮತ್ತು ಸಿದ್ದರಾಮಯ್ಯರವರ ಮನೆ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ. | 2.00 |

| 1 | 2 | 3 | 4 |
|---|---|---|---|
| 74 | 35 | ವಾರ್ಡ್ ನಂಬರ್:35ರ ಆಯ್ದ ಸ್ಥಳಗಳಲ್ಲಿ 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 3.00 |
| 75 | | ಸುಭಾಷ್ ನಗರ ಅಂಬೇಡ್ಕರ್ ಭವನದ ಪಶ್ಚಿಮ ಭಾಗದ ರಸ್ತೆ ಹಾಗೂ ವಿನೋಭಾ ರಸ್ತೆ ಕ್ಯಾಂಟೀನ್ ಹತ್ತಿರ ಡೆಕ್ ಸ್ಲ್ಯಾಬ್ ನಿರ್ಮಾಣ ಹಾಗೂ ಜೈಲ್ ಹಿಂಭಾಗದ ರಸ್ತೆಗಳ ಅಭಿವೃದ್ಧಿ (ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಸೂಚಿಸಿರುವ ಕಾಮಗಾರಿ) | 9.00 |
| 76 | | 250 ವ್ಯಾಟ್ಸ್ ಮೆಟಲ್ ಅಲಾಯಿಡ್ ಬೀದಿ ದೀಪ ಸರಬರಾಜು ಮಾಡಿ ಅಳವಡಿಸುವುದು | 1.00 |
| | | **ಒಟ್ಟು** | 370.00 |

**ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲಾಯಿತು.**

<u>ವಿಷಯ:2:–</u> ಸರ್ಕಾರದಿಂದ ಬಂದಿರುವ ಆದೇಶಗಳು ಮತ್ತು ಸುತ್ತೋಲೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.
<u>ತೀರ್ಮಾನ:2:–</u> (1) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/21/ಎಸ್‌ಎಫ್‌ಸಿ/2008 ಬೆಂಗಳೂರು ದಿನಾಂಕ:22–7–2008ರ ಸುತ್ತೋಲೆಯನ್ನು ಓದಿ ರೆಕಾರ್ಡು ಮಾಡಲಾಯಿತು.

ಸದರಿ ಸುತ್ತೋಲೆಯಲ್ಲಿ 2008–09ನೇ ಸಾಲಿಗೆ ನಗರಾಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ 8,87,19,000/–ಗಳು ಬಿಡುಗಡೆಯಾಗಲಿರುವ ಮೊಬಲಗಿನಲ್ಲಿ ಕಾಮಗಾರಿಗಳ ಬಾಕಿ ಬಿಲ್‌ಗಳ ಪಾವತಿ, ಹೈಮಾಸ್ಟ್ ಲೈಟ್ ವ್ಯವಸ್ಥೆ ವೆಚ್ಚ, ಶೇ.18ರ ಕ್ರಿಯಾ ಯೋಜನೆಗಳಿಗಾಗಿ ವೆಚ್ಚ ಮತ್ತು ಕೆ.ಯು.ಐ.ಡಿ.ಎಫ್.ಸಿ. ಸಾಲದ ಬಾಬ್ತು ಮರುಪಾವತಿ ಮಾಡಿ ಉಳಿದ ಹಣವನ್ನು ನಗರಸಭೆಯ 35 ವಾರ್ಡ್‌ಗಳಿಗೂ ಸಮಭಾಗವಾಗಿ ಅಭಿವೃದ್ಧಿ ಕೆಲಸ ಕಾರ್ಯಗಳ ನಿರ್ವಹಣೆ ಗಾಗಿ ಹಂಚಿಕೆ ಮಾಡಿ ಕ್ರಿಯಾ ಯೋಜನೆ ತಯಾರಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

ಮಾನ್ಯ ಶಾಸಕರು ಸ್ಟೇಡಿಯಂ ಆವರಣದಲ್ಲಿ ಹೈಮಾಸ್ಟ್ ಲೈಟ್ ವ್ಯವಸ್ಥೆಯನ್ನು ಸಹ ಸದರಿ ಅನುದಾನದಲ್ಲಿ ಮಾಡಿಸಲು ಸೂಚಿಸಿದರು. ಶಾಸಕರ ಸೂಚನೆಯನ್ನು ಅನುಮೋದಿಸಲಾಯಿತು. ಈ ಹಿಂದೆ ಆಯ್ಕೆ ಮಾಡಿದ್ದ 10 ಸ್ಥಳಗಳೊಡನೆ ಸರ್.ಎಂ.ವಿ.ಕ್ರೀಡಾಂಗಣದಲ್ಲಿ ಹೈಮಾಸ್ಟ್ ದೀಪ ಅಳವಡಿಸಲು ಸೇರ್ಪಡೆ ಮಾಡಿ ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.

<u>ವಿವರ:–</u>

| | | | |
|---|---|---|---|
| **ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/21/ಎಸ್‌ಎಫ್‌ಸಿ/2008 ಬೆಂಗಳೂರು ದಿನಾಂಕ:22–7–2008ರ ಸುತ್ತೋಲೆ ಆದೇಶದಂತೆ ಮಂಡ್ಯ ನಗರಸಭೆಗೆ2008–09ನೇ ಸಾಲಿಗೆ ಬಿಡುಗಡೆಗಾಗಿ ಮಂಜೂರಾಗಿರುವ ಮೊಬಲಗು** | | | **ರೂ.8,87,19,000–00** |
| 1 | ಶೇಕಡ 18ರ ಲೆಕ್ಕ ಶೀರ್ಷಿಕೆ ಬಾಬ್ತು ಕ್ರಿಯಾ ಯೋಜನೆಗಾಗಿ | ರೂ.1,59,69,420–00 | |
| | 2006–07 ಮತ್ತು 2007–08ನೇ ಸಾಲಿನ S.F.C.ಅನುದಾನದ ಬಾಕಿ ಬಿಲ್ ಪಾವತಿಸಲು | –ರೂ.46,35,000–00 | |
| | | ರೂ. 1,13,34,420–00 | |
| 2 | 2006–07ನೇ ಸಾಲಿನ ಎಸ್.ಎಫ್.ಸಿ. ಮೊದಲನೇ ಹಂತ ಮತ್ತು 2007–08ನೇ ಸಾಲಿನ ಎಸ್.ಎಫ್.ಸಿ. ಎರಡನೇ ಹಂತಗಳಲ್ಲಿ ಬಾಕಿ ಉಳಿದಿರುವ ಕಾಮಗಾರಿ ಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು | ರೂ3,90,00,000–00 | |
| 3 | ಹೈಮಾಸ್ಟ ದೀಪಗಳನ್ನು ಅಳವಡಿಸಲು | ರೂ. 66,00,000–00 | |
| 4 | ಕೆ.ಯು.ಐ.ಡಿ.ಎಫ್.ಸಿ. ಸಾಲದ ಮರುಪಾವತಿಗಾಗಿ ಕಟಾಯಿಸಲಿರುವ ಬಾಬ್ತು | ರೂ. 50,00,000–00 | |
| | **ಒಟ್ಟು** | **ರೂ.6,65,69,420–00** | **ರೂ.6,65,69,420–00** |
| **ಉಳಿಕೆ** | | | **ರೂ.2,21,49,580–00** |
| **ಉಳಿಕೆ ಮೊಬಲಗು 2,21,49,580–00 ಗಳಲ್ಲಿ ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ಧೇಶಿಸಲಾಗಿದ್ದು ಕಾಮಗಾರಿಗಳು ಈ ಕೆಳಕಂಡಂತೆ ಇರುತ್ತದೆ.** | | | |

**ಕಾಮಗಾರಿ ವಿವರ ಪಟ್ಟಿ**

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2 | 3 | 4 |
| 1 | 1 | ಎಸ್.ಎಲ್.ಜೆ.ರಸ್ತೆಯ ಉತ್ತರಕ್ಕೆ (ಮಸೀದಿ ಮುಂಭಾಗ) ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 2 | 2 | ಮಂಡ್ಯ ಪ್ರೆಸ್ ಮುಂಭಾಗದ ರಸ್ತೆಯಲ್ಲಿ (ದಕ್ಷಿಣಕ್ಕೆ) ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 3 | 3 | ರೈಲ್ವೆ ಲೈನ್ ಪಕ್ಕದ ರಸ್ತೆ ಅಭಿವೃದ್ಧಿ | 3.00 |
| 4 | 3 | ರೈಲ್ವೆ ಲೈನ್ ಪಕ್ಕದ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ | 3.00 |
| 5 | 4 | ಶಂಕರಮಠಧ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 6 | 5 | ಬಂದೀಗೌಡ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ | 6.00 |
| 7 | 6 | ಹಳೇ ಕಲ್ಲಹಳ್ಳಿ ರಸ್ತೆಗಳಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 8 | 7 | ವಿ.ವಿ.ನಗರ ಎ.ಪಿ.ಎಂ.ಸಿ.ರಸ್ತೆ ಪಶ್ಚಿಮಕ್ಕೆ ಇರುವ 10 ಮತ್ತು 11ನೇ ಕ್ರಾಸ್ ರಸ್ತೆಗಳಿಗೆ ಮೆಟಲಿಂಗ್ ಮಾಡುವುದು. | 6.00 |
| 9 | 8 | ಮರೀಗೌಡ ಬಡಾವಣೆ 2ನೇ ಕ್ರಾಸ್ ರಸ್ತೆಗೆ ಮೆಟಲಿಂಗ್ ಮಾಡಿ ಡಾಂಬರೀಕರಣ ಮಾಡುವುದು ಹಾಗೂ ಕಾಳೇಗೌಡ ಸ್ಕೂಲ್ ರಸ್ತೆ ಡಾಂಬರೀಕರಣ | 6.00 |
| 10 | 9 | ಪೋಲೀಸ್ ವಸತಿ ಗೃಹದ ಆವರಣದಲ್ಲಿ ರಸ್ತೆ ಅಭಿವೃದ್ಧಿ. | 6.00 |
| 11 | 10 | ಸುಭಾಷ್‌ನಗರ 4ನೇ ಕ್ರಾಸ್ ಎಂ.ಬಿ.ಶ್ರೀಕಾಂತ್‌ರವರ ಮನೆಯಿಂದ ಶ್ರೀನಿವಾಸರಾವ್ ಮನೆಯವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 12 | 11 | ಗಾಂಧಿನಗರ ಉಪ್ಪಿನಕಾಯಿ ಪ್ರಸಾದ್ ಮನೆಯಿಂದ ಸ್ವಾತಿ ಹೋಟೆಲ್‌ವರೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 13 | 12 | ಗಾಂಧಿನಗರ ಕ್ರಾಸ್ ರಸ್ತೆಗಳಲ್ಲಿ ಡಾಂಬರೀಕರಣ (ಪ್ರಯಾಗ್ ಮೋಟಾರ್ಸ್ ಪಕ್ಕದ ರಸ್ತೆ ಮತ್ತು ಗಾಂಧಿನಗರ 5ನೇ ಕ್ರಾಸ್) | 6.00 |
| 14 | 13 | ಗಾಂಧಿನಗರ 6 ಮತ್ತು 7ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ. ಮತ್ತು ಚಪ್ಪಡಿ ಚರಂಡಿ ನಿರ್ಮಾಣ. | 6.00 |
| 15 | 14 | ಚಾಮುಂಡೇಶ್ವರಿ ನಗರ ಕೆ.ಎಸ್.ಬಸವರಾಜು ಮನೆಯಿಂದ ಮಾಸ್ಟರ್ ಗೋಪಾಲ್ ಮನೆಯವರೆಗೆ ರಸ್ತೆ ಅಭಿವೃದ್ಧಿ ಮತ್ತು ನಗರಸಭಾ ಸದಸ್ಯರಮನೆಯ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ. | 6.00 |
| 16 | 15 | ಕುವೆಂಪುನಗರದಲ್ಲಿ ರಸ್ತೆ ಅಭಿವೃದ್ಧಿ, ಆರ್.ಸಿ.ಸಿ.ಚರಂಡಿ ಮತ್ತು ಡೆಕ್ ಸ್ಲ್ಯಾಬ್ಕ ನಿರ್ಮಾಣ. | 6.00 |
| 17 | 16 | ಹೊಸಹಳ್ಳಿ ಕಾರಸವಾಡಿ ರಸ್ತೆಯ 1ನೇ ಕ್ರಾಸ್ ರಮೇಶ್‌ರವರ ಮನೆಯ ಮುಂಭಾಗ ಎರಡೂ ಬದಿಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 18 | 17 | ಹೌಸಿಂಗ್ ಬೋರ್ಡ್ ಕಾಲೋನಿ ಮೊದಲನೇ ಹಂತ ಆದರ್ಶ ಶಾಲೆಯ ಹಿಂಭಾಗ ಮಿಲಿಟರಿ ಶ್ರೀನಿವಾಸ್ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ. | 6.00 |
| 19 | 18 | ಗಾಂಧಿನಗರ 4ನೇ ಕ್ರಾಸ್‌ನಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 20 | 19 | ಅಶೋಕನಗರ ಶಿವಪ್ರಕಾಶ್ ಬಾಬು ಮನೆಯ ಮುಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 |
| 21 | 20 | ಹೊಸಹಳ್ಳಿ ಹರಿಶ್ಚಂದ್ರ ಸರ್ಕಲ್ ವೃತ್ತದ 4ಕ್ರಾಸ್ ರಸ್ತೆಗಳ ಅಭಿವೃಧಿ ಮತ್ತು ಹೊಸಹಳ್ಳಿ ಟ್ಯಾಂಕ್ ಬಂಡ್ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 |
| 22 | 21 | ಹಾಲಹಳ್ಳಿ 1ನೇ ಕ್ರಾಸ್ ಮತ್ತು ಹೊಸಹಳ್ಳಿ 4ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 |
| 23 | 22 | ಹಾಲಹಳ್ಳಿಕೆರೆ ರಸ್ತೆಗೆ ಎರಡು ಬದಿಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ | 6.00 |
| 24 | 23 | ಮಸೀದಿಯ ಹತ್ತಿರ ಆರ್.ಸಿ.ಸಿ.ಚರಂಡಿ ಹಾಗೂ ಡಎಕ್ ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ | 6.00 |
| 25 | 24 | ತಮಿಳು ಕಾಲೋನಿಯಲ್ಲಿ ಡ್ರೈನ್ , ಕಾಂಪೌಂಡ್ ಮತ್ತು ಡೆಕ್ ಕಾಮಗಾರಿ. | 6.00 |
| 26 | 25 | ಲೇಬರ್ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 6.00 |
| 27 | 26 | ಸಫ್ಧರಿಯಾ ಬಾದ್ ಮೊಹಲ್ಲಾದ ಟಿಪ್ಪು ರಸ್ತೆಯ ಮುಂಭಾಗ 1ನೇ ಕ್ರಾಸ್ಗ ಮತ್ತು 2ನೇ ಕ್ರಾಸ್ ರಸ್ತೆಗಳಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 28 | 27 | ತಾವರಗೆರೆಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಆರ್.ಸಿ.ಸಿ.ಚರಂಡಿ ಹಾಗೂ ಡೆಕ್ ನಿರ್ಮಾಣ. | 6.00 |
| 29 | 28 | ಜಯಲಕ್ಷ್ಮಿ ಸಾಮಿಲ್ ಮುಂಭಾಗದ ಬಲಭಾಗದ 4 ರಸ್ತೆಗಳು ಅಭಿರ್ವಖುದ್ಧಿ ;ಕಾಮಗಾರಿ) | 6.00 |
| 30 | 28 | ಜಯಲಕ್ಷ್ಮಿ ಸಾಮಿಲ್ ಮುಂಭಾಗದ ರಸ್ತೆಯ ಎಡಭಾಗದ ರಸ್ತೆ ಅಭಿವೃದ್ಧಿಪಡಿಸುವುದು (ಶಾಸಕರ ಸೂಚನೆಯ ಮೇರೆಗೆ) | 6.00 |

| 1 | 2 | 3 | 4 |
|---|---|---|---|
| 31 | 29 | ಗುತ್ತಲಿನ ಜಯಲಕ್ಷ್ಮಿ ಟಾಕೀಸ್ ಹಿಂಭಾಗ ಆರ್.ಸಿ.ಸಿ.ಡೆಕ್ಕ ಹಾಗೂ ರಸ್ತೆ ಅಭಿವೃದ್ಧಿ | 6.00 |
| 32 | 30 | ಅರಕೇಶ್ವರನಗರದಲ್ಲಿ ರಸ್ತೆ ಅಭಿವೃದ್ಧಿ, ಆರ್.ಸಿ.ಸಿ.ಸ್ಲ್ಯಾಬ್ ಕಲ್ವರ್ಟ್ ನಿರ್ಮಾಣ ಮತ್ತು ಆರ್.ಸಿ.ಸಿ.ಚರಂಡಿ ನಿರ್ಮಾಣ ಕಾಮಗಾರಿ | .6.00 |
| 33 | 31 | ವಾರ್ಡ್ ನಂ.31ರ ಆಯ್ದ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಾಣ. | 6.00 |
| 34 | 32 | ವಾರ್ಡ್ ನಂಬರ್:32ರ ಆಯ್ದ ರಸ್ತೆಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಾಣ. | |
| 35 | 33 | ಸ್ವರ್ಣಸಂದ್ರ ಹರಿರಾಂ ರಸ್ತೆಯಲ್ಲಿ ಪಶ್ಚಿಮದ ಕಡೆಗೆ ಆರ್.ಸಿ.ಸಿ.ಚರಂಡಿ ನಿರ್ಮಾಣ (ಕೆ.ಹೆಚ್.ಬಿ. ಕಡೆಯಿಂದ) | 6.00 |
| 36 | 34 | ಮಾರುತಿ ನಗರ 7ನೇ ಕ್ರಾಸ್ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ. | 6.00 |
| 37 | 35 | ದೇವೇಗೌಡನದೊಡ್ಡಿ ಮತ್ತು ಷುಗರ್ ಟೌನ್‌ನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ. | 6.00 |
| 38 | | ಕಾಳೇಗೌಡ ಸ್ಕೂಲ್ ರಸ್ತೆಯಲ್ಲಿ ಆರ್.ಸಿ.ಸಿ.ಚರಂಡಿ ನಿರ್ಮಾಣ (ಮಾನ್ಯ ವಿಧಾನ ಪರಿಷತ್ ಸದಸ್ಯರ ಸೂಚನೆಯ ಮೇರೆಗೆ) | 6.00 |
| | | **ಒಟ್ಟು** | **222.00** |

ಮೇಲ್ಕಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು. ತುರ್ತಾಗಿ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಹಾಗೂ ಸರ್ಕಾರದ ಆದೇಶ ಸಂಖ್ಯೆ:ಪೌನಿ/ತಾಂತ್ರಿಕ/12ನೇ ಹಣಕಾಸು/172/2005–06 ದಿನಾಂಕ:26–07–2008 ರಂತೆ 2008–09ನೇ ಸಾಲಿಗೆ 12ನೇ ಹಣಕಾಸು ಆಯೋಗದ ಅನುದಾನದಲ್ಲಿ ಕೈಗೊಳ್ಳುವ ಈ ಕೆಳಕಂಡ ಕಾಮಗಾರಿಗಳಿಗೆ ಮಂಜೂರಾತಿ ನೀಡಿ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊಬಲಗು |
|---|---|---|---|
| 1 | 2 | 3 | 4 |
| 1 | 1 | ಶಂಕರ್ ಮನೆ ಮುಂಭಾಗ ( ಸಂಗೀತ್ ಎಲೆಕ್ಟ್ರಾನಿಕ್ಸ್ ಪಕ್ಕದಲ್ಲಿ) ಕಾಂಕ್ರೀಟ್ ರಸ್ತೆ ಮತ್ತು ಮಳೆ ನೀರಿನ ಚರಂಡಿ ಮೇಲ್ಭಾಗ ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ. | 3.00ಲಕ್ಷ |
| 2 | 2 | ಮಹಾವೀರ ಗ್ಲಾಸ್ ಅಂಡ್ ಪ್ಲೈವುಡ್ ಪಕ್ಕದ ಗಲ್ಲಿ, ರಮೇಶ್ ಮನೆ ಗಲ್ಲಿ, ನಗರಸಭೆ ಕಟ್ಟಡದ ಪಕ್ಕ ಗಲ್ಲಿ ಮತ್ತು ವರಲಕ್ಷ್ಮಿ ಜುವೆಲರ್ಸ್ ಹಿಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ.. | 3.00ಲಕ್ಷ |
| 3 | 3 | ಡಿ.ಸಿ.ಸಿ.ಬ್ಯಾಂಕ್ ಹಿಂಭಾಗದ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 4 | 4 | ಶಂಕರಮಠ ರಸ್ತೆ ಡಾಂಬರೀಕರಣ ಕಾಮಗಾರಿ. | 3.00ಲಕ್ಷ |
| 5 | 5 | ಬಂದೀಗೌಡ ಬಡಾವಣೆ ಬಿ.ಜಿ.ಎಸ್. ಆಸ್ಪತ್ರೆ ಡೆಕ್ ಸ್ಲ್ಯಾಬ್ ನಿರ್ಮಾಣ ಹಾಗೂ ರಸ್ತೆ ಅಭಿವೃದ್ಧಿ ಮತ್ತು ನಾಗೇಂದ್ರರವರ ಮನೆ ಪಕ್ಕ ಡೆಕ್ ಸ್ಲ್ಯಾಬ್ ಎತ್ತರಿಸುವ ಕಾಮಗಾರಿ. | 3.00ಲಕ್ಷ |
| 6 | 6 | ಕಾಳೇಗೌಡರ ಮನೆಯಿಂದ ಹಳೇ ಎಂ.ಸಿ. ರಸ್ತೆ ವರೆಗೆ ರಸ್ತೆ ಅಭಿವೃದ್ಧಿ ಹಾಗೂ ಡೆಕ್ ಸ್ಲ್ಯಾಬ್ ನಿರ್ಮಾಣ ಕಾಮಗಾರಿ. | 3.00ಲಕ್ಷ |
| 7 | 7 | ಅತ್ರೇಯ ಸ್ಕೂಲ್ ರಸ್ತೆ ಪಶ್ಚಿಮದ ಕಡೆ ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿ. | 3.0ಲಕ್ಷ |
| 8 | 8 | ಜೈಲ್ ಹಿಂಭಾಗ ಸುರೇಂದ್ರರವರ ಮನೆ ಮುಂಭಾಗದ ರಸ್ತೆ ಹಾಗೂ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 9 | 9 | ಪೋಲೀಸ್ ವಸತಿ ಗೃಹ ಆವರಣದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ. | 3.00ಲಕ್ಷ |
| 10 | 10 | ಸುಭಾಷ್‌ನಗರದ ರಸ್ತೆಗಳ ಅಬಿವೃದ್ಧಿ ಕಾಮಗಾರಿ | 3.00ಲಕ್ಷ |
| 11 | 11 | ಆರ್.ಪಿ.ರಸ್ತೆಯಿಂದ ವೆಂಕಟಗಿರಿಯಪ್ಪ ಪಾರ್ಕ್ ವರೆಗಿನ ರಸ್ತೆಗೆ ಡಾಂಬರೀಕರಣ ಕಾಮಗಾರಿ. | 3.00ಲಕ್ಷ |
| 12 | 12 | ಗಾಂಧಿನಗರ 5ನೇ ಕ್ರಾಸ್‌ನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ | 3.00ಲಕ್ಷ |
| 13 | | ನೂರಡಿ ರಸ್ತೆ ದುರಸ್ತಿ ಕಾಮಗಾರಿ. | 3.00ಲಕ್ಷ |
| 14 | 13 | ಗಾಂಧಿನಗರ 9ನೇ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಡೆಕ್ ನಿರ್ಮಾಣ ಕಾಮಗಾರಿ. | 3.00ಲಕ್ಷ |

| 1 | | 2 | 3 |
|---|---|---|---|
| 15 | 14 | ಚಾಮುಂಡೇಶ್ವರಿನಗರ 2ನೇ ಕ್ರಾಸ್ ಬಿ.ಟಿ.ಅಂಕಯ್ಯರವರ ಮನೆ ಮುಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 16 | 15 | ಗಾಂಧಿನಗರ 10ನೇ ಕ್ರಾಸ್ ಚರ್ಚ್ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡೆಕ್ ಕಾಮಗಾರಿ | 3.00ಲಕ್ಷ |
| 17 | 16 | ಕಾರಸವಾಡಿ ರಸ್ತೆ 4ನೇ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡೆಕ್ ನಿರ್ಮಾಣ ಕಾಮಗಾರಿ | 3.00ಲಕ್ಷ |
| 18 | 17 | ಕುವೆಂಪುನಗರ ಪೋಸ್ಟ್ ಆಫೀಸ್ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 19 | 18 | ಗಾಂಧಿನಗರದಲ್ಲಿ ಆರ್.ಸಿ.ಸಿ.ಡೆಕ್ ನಿರ್ಮಾಣ ಕಾಮಗಾರಿ | 3.00ಲಕ್ಷ |
| 20 | 19 | ಅಶೋಕನಗರ ಕೌನ್ಸಿಲರ್ ಶಿವಪ್ರಕಾಶ್ ಬಾಬುರವರ ಮನೆ ರಸ್ತೆ ಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 21 | 20 | ಹೊಸಹಳ್ಳಿ 1ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 22 | 21 | ಹಾಲಹಳ್ಳಿ 4ನೇ ಕ್ರಾಸ್‌ನಲ್ಲಿ ಮಾಜಿ ಕೌನ್ಸಿಲರ್ ಹೆಚ್.ಕೆ.ರುದ್ರಪ್ಪರವರ ಮನೆ ಪಕ್ಕದ ರಸ್ತೆಗೆ ಕಾಂಕ್ರೀಟ್ ಕಾಮಗಾರಿ | 3.00ಲಕ್ಷ |
| 23 | 22 | ಹಾಲಹಳ್ಳಿ ಸ್ಲಂನಲ್ಲಿ ಕೌನ್ಸಿಲರ್ ಭಾಗ್ಯಮ್ಮರವರ ಮನೆ ಹತ್ತಿರದ ರಸ್ತೆ ಅಭಿವೃದ್ಧಿ ಕಾಮಗಾರಿ . | 3.00ಲಕ್ಷ |
| 24 | 23 | ಉದಯಗಿರಿ 7ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 25 | 24 | ತಮಿಳು ಕಾಲೋನಿಯಲ್ಲಿ ಮಾಂಡವ್ಯ ಕಾಲೇಜಿನ ಹಿಂಭಾಗದ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 26 | 25 | ತಾವರೆಗೆರೆಯಲ್ಲಿ ಎಸ್.ಬಿ.ಸಮುದಾಯ ಭವನ ಪಕ್ಕದ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿ (ಸಿ.ಸಿ.ರಸ್ತೆ ) | 3.00ಲಕ್ಷ |
| 27 | 26 | ಸಫ್ಧರಿಯಾಬಾದ್ ಮೊಹಲ್ಲದಲ್ಲಿ ಆರ್.ಸಿ.ಸಿ.ಡೆಕ್ ನಿರ್ಮಾಣ ಕಾಮಗಾರಿ ಹಾಗೂ ಮಸೀದಿ ಮುಂಭಾಗದ ಗಲ್ಲಿಗೆ ಕಾಂಕ್ರೀಟ್ ರಸ್ತೆ ಕಾಮಗಾರಿ | 3.00ಲಕ್ಷ |
| 28 | 27 | ತಾವರೆಗೆರೆ 4ನೇ ಅಡ್ಡ ರಸ್ತೆಯಿಂದ ಯತ್ತಗದ ಹಳ್ಳಿ ರಸ್ತೆವರೆಗೆ ರಸ್ತೆ ನಿರ್ಮಾಣ ಹಾಗೂ ವಿ.ವಿ.ನಗರ 3ನೇ ಕ್ರಾಸ್ ರಸ್ತೆ ಅಭಿವೃದ್ಧಿ ಮತ್ತು ಆರ್.ಸಿ.ಸಿ.ಡೆಕ್ ಕಾಮಗಾರಿ. | 3.00ಲಕ್ಷ |
| 20 | 28 | ವಿವಿಧ ಕಡೆಗಳಲ್ಲಿ ಆರ್.ಸಿ.ಸಿ.ಡೆಕ್ ನಿರ್ಮಾಣ ಕಾಮಗಾರಿ. | 3.00 |
| 30 | 29 | ಜಯಲಕ್ಷ್ಮಿ ಟಾಕೀಸ್ ಪಕ್ಕದ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 31 | 30 | ಹಳೇ ಗುತ್ತಲು ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ವಿಮಲಾ ಕಾನ್ವೆಂಟ್ ರಸ್ತೆಯ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 32 | 31 | ಒಂದನೇ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 33 | 32 | ಗಿರಿಜಾ ಟಾಕೀಸ್ ಮುಂಭಾಗದಲ್ಲಿರುವ ಹೊನ್ನಯ್ಯ ಬಡಾವಣೆಯ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 34 | 33 | ಷುಗರ್ ಪ್ರೌಢ ಶಾಲೆಯ ಪಕ್ಕದ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 35 | 34 | ಚಿಕ್ಕೇಗೌಡನದೊಡ್ಡಿಯಲ್ಲಿ ಆರ್.ಸಿ.ಸಿ.ಡೆಕ್ ನಿರ್ಮಾಣ ಹಾಗೂ 3ನೇ ಅಡ್ಡ ರಸ್ತೆ ಅಭಿವೃದ್ಧಿ ಕಾಮಗಾರಿ. | 3.00ಲಕ್ಷ |
| 36 | 35 | ಷುಗರ್ ಟೌನ್‌ನಲ್ಲಿ ಪೋಸ್ಟ್ ಆಫೀಸ್ ಎದುರು ಭಾಗದ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ. | 3.00ಲಕ್ಷ |

ಪೌರಾಯುಕ್ತರು ಸಭೆಯಲ್ಲಿ ಸರ್ಕಾರದ ಸುತ್ತೋಲೆ ಪ್ರಕಾರ ಯಾವುದೇ ಮಳಿಗೆಗಳ ವಿಲೇವಾರಿ ಮಾಡಬೇಕಾದಲ್ಲಿ ಬಹಿರಂಗ ಹರಾಜು ಮೂಲಕ ಮಾಡಬೇಕಾಗುತ್ತದೆ ಎಂದು ತಿಳಿಸಿದರು. 2008–09ನೇ ಸಾಲಿನಲ್ಲಿ ಸರ್ಕಾರದಿಂದ ನಗರ ಸಭೆಗೆ ಮಂಜೂರಾಗಿರುವ ಮೊಬಲಗನ್ನು ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ:ನಅಇ/37/ಎಸ್.ಎಫ್.ಸಿ./2008 ದಿನಾಂಕ:21–8–2008ರಂತೆ ಕ್ರಮ ವಹಿಸಲು ಸಹ ತೀರ್ಮಾನಿಸಲಾಯಿತು.

(3) ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ಎಸ್.ಓ.ಜಿ.40/2002/4828 ದಿನಾಂಕ: 8–8–2008ರಂತೆ ಪತ್ರ ಬರೆದು 2002–03ನೇ ಸಾಲಿನ ವಿಶೇಷ ಉದ್ಯೋಗ ಗುಂಪಿನ ಯೋಜನೆಯಡಿ ಮಂಡ್ಯ ಜಿಲ್ಲೆಯ ಚಿಕ್ಕಮಂಡ್ಯದಲ್ಲಿ ನಿರ್ಮಿಸಿರುವ ಬಡಾವಣೆಯನ್ನು ನಗರಸಭೆ ಸುಪರ್ಧಿಗೆ ಹಸ್ತಾಂತರಿಸುವ ಬಗ್ಗೆ ಕೋರಿರುವ ಪತ್ರವನ್ನು ಸಭೆಯಲ್ಲಿ ಓದಲಾಯಿತು.

ನಂತರ ರಾಜೀವ ಗಾಂಧಿ ವಸತಿ ನಿಗಮದ ಅಧಿಕಾರಿಗಳು ಮತ್ತು ನಗರಸಭೆ, ಅಧ್ಯಕ್ಷರು, ಪೌರಾಯುಕ್ತರು ಮತ್ತು ಅಭಿಯಂತರರುಗಳು ಜಂಟಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ಸಭೆಯಲ್ಲಿ ಸರ್ಕಾರದ ಸುತ್ತೋಲೆಗಳನ್ನು ಮತ್ತು ಪತ್ರಗಳನ್ನು ಓದಿ ರೆಕಾರ್ಡು ಮಾಡಲಾಯಿತು.**

**ವಿಷಯ:3:–** 2008ನೇ ಜುಲೈ ಮಾಹೆಯ ಜಮೆ ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:3:–** 2008ನೇ ಜುಲೈ ಮಾಹೆಯ ಜಮೆ ಖರ್ಚುಗಳನ್ನು ಓದಿ ಒಪ್ಪಿ ರೆಕಾರ್ಡು ಮಾಡಲಾಯಿತು.

**ವಿಷಯ:4:–** ದಿನಾಂಕ: 19–7–2008ರಂದು ಮುಂದೂಡಿದ ವಿಷಯ ಸಂಖ್ಯೆ:5 ಶೇಕಡ 18ರ ಲೆಕ್ಕ ಶೀರ್ಷಿಕೆಯಲ್ಲಿ 2008–09ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ:4:–** ಮಾನ್ಯ ಶಾಸಕರು ಕ್ರಿಯಾ ಯೋಜನೆ ಆಗಿದೆ. ಅದರಂತೆ ಕ್ರಮ ವಹಿಸಬೇಕಾಗಿದೆ ಎಂದು ತಿಳಿಸಿದರು.

ನಂತರ ಶ್ರೀ.ಎಂ.ಎಲ್.ಮಂಜುನಾಥ್ ರವರು ಶೇಕಡ 18ರ ಲೆಕ್ಕ ಶೀರ್ಷಿಕೆಯಡಿಯಲ್ಲಿ 2008–09ನೇ ಸಾಲಿಗೆ ತಯಾರಿಸಿರುವ ಕ್ರಿಯಾ ಯೋಜನೆ ಪಾರದರ್ಶಕತೆಯಿಂದ ಕೂಡಿರುವುದರಿಂದ ಒಪ್ಪಬಹುದಾಗಿದೆ ಎಂದು ಸೂಚಿಸಿದ್ದರ ಮೇರೆಗೆ, 2008–09ನೇ ಸಾಲಿಗೆ ತಯಾರಿಸಿರುವ ಕ್ರಿಯಾ ಯೋಜನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ಶೇಕಡ 18ರ ಯೋಜನೆ ಲೆಕ್ಕ ಶೀರ್ಷಿಕೆಯಲ್ಲಿ 2008–09ನೇ ಸಾಲಿಗೆ ಕ್ರಿಯಾ ಯೋಜನೆ ವಿವರ.**

| ಕ್ರಮ ಸಂಖ್ಯೆ | ವಿವರ | ಮೊಬಲಗು ರೂ.ಲಕ್ಷಗಳಲ್ಲಿ |
|---|---|---|
| 1 | 2 | 3 |
| **I** | **ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ:–** | |
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾವಂತರಿಗೆ ಕಂಪ್ಯೂಟರ್ ತರಬೇತಿ ನೀಡಲು ಮತ್ತು ಉನ್ನತ ವಿದ್ಯಾಭ್ಯಾಸಕ್ಕಾಗಿ ಸಹಾಯಧನ. | 2.44 |
| 2 | ವಾಹನ ಚಾಲನೆ ತರಬೇತಿಗಾಗಿ (ಆಟೋ ಮತ್ತು ಕಾರು) ಮತ್ತು ಡ್ರೈವಿಂಗ್ ಲೈಸೆನ್ಸ್‌ಗಾಗಿ | 1.50 |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ ಹಾಗೂ ಹೊಲಿಗೆ ಯಂತ್ರಗಳನ್ನು ನೀಡಲು | 2.50 |
| 4 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಮತ್ತು ಇತರೆ ತಟ್ಟೆ ಲೋಟಗಳನ್ನು ನೀಡಲು. | 2.50 |
| 5 | ನೇಮಕಾತಿ ಪ್ರಾಧಿಕಾರಿಗಳಿಂದ ಸಂದರ್ಶನಕ್ಕೆ ಹೋಗುವ ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ–ವ್ಯಕ್ತಿಗಳಿಗೆ ವಾಸ್ತವವಾಗಿ ಹೋಗಿಬರಲು ಬಸ್ /2ನೇ ದರ್ಜೆ ರೈಲು ಪ್ರಯಾಣ ವೆಚ್ಚ ನೀಡಲು. | 0.50 |
| | **ಒಟ್ಟು** | **9.44** |
| **II** | **ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ:–** | |
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಾಂಗದ ಕೂಲಿ ಮಾಡುವವರಿಗೆ ನಾಲ್ಕು ಚಕ್ರಗಳ ಗಾಡಿಗಳನ್ನು ಕೊಡಿಸುವುದಕ್ಕಾಗಿ. | 1.44 |

| 1 | 2 | 3 |
|---|---|---|
| 2 | ಪರಿಶಿಷ್ಠ ಜಾತಿ/ಪರಿಶಿಷ್ಟ ಪಂಗಡಗಳ ನೋಂದಾಯಿತ ಸಂಘ ಸಂಸ್ಥೆಗಳಿಗೆ ಕಲರ್ ಟಿ.ವಿ. ಕೊಡಿಸುವುದಕ್ಕಾಗಿ. | 1.00 |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಆರ್ಥಿಕ ಪ್ರಗತಿಗಾಗಿ ವೃತ್ತಿಯನ್ನು ಪ್ರಾರಂಭಿಸಲು ವಿವಿಧ ಕೌಶಲ್ಯ ತರಬೇತಿಯನ್ನು ಪಡೆದವರಿಗೆ ಉಪಕರಣಗಳನ್ನು ಮತ್ತು ಸಾಧನ ಸಲಕರಣೆಗಳನ್ನು ಪೂರೈಸುವುದಕ್ಕಾಗಿ | 1.00 |
| 4 | ಬಾಬು ಜಗಜೀವನ್‌ರಾಂ ರವರ 117ನೇ ಜನ್ಮ ದಿನಾಚರಣೆ ಕಾರ್ಯಕ್ರಮಕ್ಕೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ವಂತಿಕೆ ನೀಡಿರುವುದು. | 1.50 |
| 5 | 2007–08ನೇ ಸಾಲಿಗೆ ನಗರಾಭಿವೃದ್ಧಿ ಇಲಾಖೆಯವರು ಗುರ್ತಿಸಿಕೊಟ್ಟಿರುವ ಸ್ಕಾವೆಂಜರ್ ಗಳಿಗೆ ಪುನರ್ವಸತಿ ಕಲ್ಪಿಸಲು ತಲಾ 3 ಜನರಿಗೆ ರೂ.50000–00(ಐವತ್ತು ಸಾವಿರ)ಗಳನ್ನು ನೀಡುವುದಕ್ಕಾಗಿ. | 1.50 |
| 6 | 2008ನೇ ಸೆಪ್ಟೆಂಬರ್ 23ರಂದು ಪೌರಕಾರ್ಮಿಕರ ದಿನಾಚರಣೆ ಆಚರಿಸಲು ಪೌರಕಾರ್ಮಿಕರಿಗೆ ನೌಕರರುಗಳಿಗೆ ವೈದ್ಯಕೀಯ ತಪಾಸಣೆ, ಗಂಬೂಟ್ ಮತ್ತು ಕಯಗವಚಗಳನ್ನು ನೀಡಲು | 3.00 |
| | **ಒಟ್ಟು** | 9.44 |
| **I I I** | **ಇತರೆ ಕಾರ್ಯಕ್ರಮಗಳಿಗಾಗಿ:** | |
| 1 | ಸುಭಾಷ್‌ನಗರ ಡಾ:ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಪಕ್ಕದಲ್ಲಿ ಕಟ್ಟುತ್ತಿರುವ ಹುಚ್ಚಮ್ಮ ದೇವಸ್ಥಾನ ಕಟ್ಟಡಕ್ಕೆ ಧನಸಹಾಯ ಕೋರಿ. | 0.50 |
| 2 | ವಾರ್ಡ್ ನಂ.25ರ ಬೋವಿ ಕಾಲೋನಿ ಮತ್ತು ಲೇಬರ್ ಕಾಲೋನಿಗಳಲ್ಲಿರುವ ಶ್ರೀ ರಾಮ ಮಂದಿರಗಳನ್ನು ದುರಸ್ತಿ ಮಾಡುವುದಕ್ಕಾಗಿ | 1.00 |
| 3 | ದಲಿತ ವಿದ್ಯಾರ್ಥಿನಿಲಯಕ್ಕೆ ರಸ್ತೆ ಚರಂಡಿ ಹಾಗೂ ಕಟ್ಟಡದ ಸಣ್ಣಮಟ್ಟ ಕಿಟಕಿ ಬಾಗಿಲುಗಳನ್ನು ಹಾಕಿಸಿಕೊಡಲು. | 0.50 |
| 4 | ವಾರ್ಡ್ ನಂಬರ್:5ರ ವಿ.ವಿ.ನಗರ ಕಲ್ಲಹಳ್ಳಿಯಲ್ಲಿರುವ ಕೊಳಚೆ ಪ್ರದೇಶದ ಹಿಂಭಾಗ ಚರಂಡಿ ನಿರ್ಮಿಸಲು . | 2.00 |
| 5 | ಬೋವಿ ಕಾಲೋನಿ ಶ್ರೀನಿವಾಸ ದೇವಸ್ಥಾನಕ್ಕೆ ಅಡಿಗೆ ಪಾತ್ರೆಗಳನ್ನು ನೀಡುವುದಕ್ಕಾಗಿ | 0.22 |
| 6 | ಗಾಂಧಿನಗರ 10ನೇ ಕ್ರಾಸ್‌ನಲ್ಲಿರುವ ಶ್ರೀ.ಸಿದ್ದಪ್ಪಾಜಿ ದೇವಸ್ಥಾನಕ್ಕೆ ಕಾಂಪೌಂಡ್ ಹಾಕಲು | 0.50 |
| | **ಒಟ್ಟು** | 4.72 |
| | **ಒಟ್ಟು ಮೊತ್ತ** | 23.60 |

**ವಿಷಯ:5:** ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯವರು ನಿರ್ಮಿಸಿರುವ 6 ಸಂಖ್ಯೆ ಶೌಚಾಲಯಗಳನ್ನು ಹಸ್ತಾಂತರಿಸಿಕೊಂಡು ದುರಸ್ತಿ ಕಾರ್ಯಗಳಿಗಾಗಿ ತಯಾರಿಸಿರುವ ರೂ. 11.00ಲಕ್ಷಗಳ ಅಂದಾಜಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:5:–** ಆಯಾಯ ವಾರ್ಡ್‌ಗಳಿಗೆ ಸಂಬಂಧಪಟ್ಟ ನಗರಸಭಾ ಸದಸ್ಯರೊಡನೆ ಸ್ಥಳ ಪರಿಶೀಲಿಸಿ ಅವರ ಅಭಿಪ್ರಾಯ ಪಡೆದು ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:6:** ಮಂಡ್ಯ ನಗರ ವ್ಯಾಪ್ತಿಯಲ್ಲಿ ಎ.ಡಿ.ಬಿ.ಯೋಜನೆಯಡಿ ವಿವಿಧ ಸ್ಥಳಗಳಲ್ಲಿ (ಗುತ್ತಲು ಸ್ಕೂಲ್ ಹತ್ತಿರ, ಸರ್ಕಾರಿ ಆಸ್ಪತ್ರೆ ಆವರಣ ಮತ್ತು ಬನ್ನೂರು ರಸ್ತೆ) ನಿರ್ಮಿಸಿರುವ ಶೌಚಾಲಯಗಳನ್ನು ದುರಸ್ತಿಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಅನುವು ಮಾಡಿಕೊಡಲು ಮಂಜೂರಾತಿ ನೀಡುವ ವಿಚಾರ.

**ತೀರ್ಮಾನ:6:–** ಮಾನ್ಯ ಶಾಸಕರಾದ ಎಂ.ಶ್ರೀನಿವಾಸ್‌ರವರು ಎ.ಡಿ.ಬಿ. ಯೋಜನೆಯಲ್ಲಿ ನಿರ್ಮಿಸಿರುವ ಶೌಚಾಲಯಗಳು ಚೆನ್ನಾಗಿವೆ. ಸಣ್ಣಮಟ್ಟ ದುರಸ್ತಿ ಮಾಡಿಸಿದರೆ ಸರಿಹೋಗುತ್ತದೆ. ಸ್ಥಳ ಪರಿಶೀಲನೆ ಮಾಡಿ ಕ್ರಮ ವಹಿಸುವುದೆಂದು ಸೂಚಿಸಿದರು. ಮಾನ್ಯ ಶಾಸಕರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

–11–

**ವಿಷಯ:7:–**ಮಂಡ್ಯ ನಗರಸಭೆಯ ಅಧ್ಯಕ್ಷರ ಕೊಠಡಿ, ಉಪಾಧ್ಯಕ್ಷರ ಕೊಠಡಿ, ಸದಸ್ಯರುಗಳ ಕೊಠಡಿ, ಶಾಸಕರ ಕೊಠಡಿ ಮತ್ತು ಪೌರಾಯುಕ್ತರ ಕೊಠಡಿಗಳಿಗೆ ಹೊಸದಾಗಿ ಟೇಬಲ್, ಕುರ್ಚಿಗಳನ್ನು ಖರೀದಿಸಲು ಮತ್ತು ನೆಲ ಹಾಸು ಕಾರ್ಪೆಟ್‌ಗಳನ್ನು ಅಳವಡಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:7:–** ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಮತ್ತು ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್ ರವರು ಮಾನ್ಯ ಜಿಲ್ಲಾಧಿಕಾರಿಗಳ ನೇರ ಒಪ್ಪಿಗೆ ಪಡೆದು ಪಾರದರ್ಶಕ ಕಾಯ್ದೆ ಪ್ರಕಾರ ಟೆಂಡರ್ ಕರೆದು ಕ್ರಮ ವಹಿಸುವುದೆಂದು ಸೂಚಿಸಿದರು. ಇವರುಗಳ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**1) ಸದಸ್ಯರ ಕೊಠಡಿಗೆ:–**

| | | |
|---|---|---|
| (1) | 'U' ಮಾದರಿ ಟೇಬಲ್ | 1 |
| (2) | ವಿ.ಐ.ಪಿ. ಕುರ್ಚಿಗಳು | 30 |
| (3) | ನೆಲ ಹಾಸು | |

**2) ಅಧ್ಯಕ್ಷರ ಕೊಠಡಿಗೆ:**

| | | |
|---|---|---|
| (1) | 'L' ಮಾದರಿ ಟೇಬಲ್ | 1 |
| (2) | ವಿ.ಐ.ಪಿ. 'S'ಮಾದರಿ ಕುರ್ಚಿಗಳು | 1 |
| (3) | ವಿ.ಐ.ಪಿ. ಕುರ್ಚಿಗಳು | 10 |
| (4) | ನೆಲ ಹಾಸು | |
| (5) | ವಾರ್ಡ್ ರೋಬ್ | 1 |

**3) ಉಪಾಧ್ಯಕ್ಷರ ಕೊಠಡಿಗೆ:**

| | | |
|---|---|---|
| (1) | 'L' ಮಾದರಿ ಟೇಬಲ್ | 1 |
| (2) | ವಿ.ಐ.ಪಿ. 'S' ಮಾದರಿ ಕುರ್ಚಿಗಳು | 1 |
| (3) | ವಿ.ಐ.ಪಿ. ಕುರ್ಚಿಗಳು | 8 |
| (4) | ನೆಲ ಹಾಸು | |

**4) ಶಾಸಕರ ಕೊಠಡಿಗೆ:**

| | | |
|---|---|---|
| (1) | 'L' ಮಾದರಿ ಟೇಬಲ್ | 1 |
| (2) | ವಿ.ಐ.ಪಿ. 'S' ಮಾದರಿ ಕುರ್ಚಿಗಳು | 1 |
| (3) | ವಿ.ಐ.ಪಿ. ಕುರ್ಚಿಗಳು | 8 |
| (4) | ನೆಲ ಹಾಸು | |

**5) ಪೌರಾಯುಕ್ತರ ಕೊಠಡಿಗೆ:**

| | | |
|---|---|---|
| (1) | 'L' ಮಾದರಿ ಟೇಬಲ್ | 1 |
| (2) | ವಿ.ಐ.ಪಿ. 'S' ಮಾದರಿ ಕುರ್ಚಿಗಳು | 1 |
| (3) | ವಿ.ಐ.ಪಿ. ಕುರ್ಚಿಗಳು | 5 |
| (4) | ನೆಲ ಹಾಸು | |

**ವಿಷಯ:8:–** ಕರ್ನಾಟಕ ಪುರಸಭಾ ಕಾಯ್ದೆ 1964ರ ಕಲಂ 63ರ ಪ್ರಕಾರ ಸ್ಥಾಯಿ ಸಮಿತಿಯನ್ನು ರಚಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ ( ದಿನಾಂಕ:19–7–2008ರ ಸಾಮಾನ್ಯ ಸಭೆ ಮುಂದೂಡಿದ ವಿಷಯ ಸಂಖ್ಯೆ:6ರಂತೆ).

**ತೀರ್ಮಾನ:8:–** ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮಾನ್ಯ ಶಾಸಕರು ಸಭೆಗೆ ಆಗಮಿಸಿರುತ್ತಾರೆ. ಈ ದಿನದ ಸಭೆಯಲ್ಲೇ ಅವರ ಸಮಕ್ಷಮದಲ್ಲಿ ಮುಕ್ತವಾಗಿ ಚರ್ಚೆ ಆಗಲಿ. 11 ಜನರ ಹೆಸರನ್ನು ಸ್ಥಾಯಿ ಸಮಿತಿ ರಚನೆಗೆ ಸೂಚಿಸಿ. ನಾವು ಮಾನ್ಯ ಶಾಸಕರ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ ಎಂದು ತಿಳಿಸಿದರು.

ಆದರೆ ಸದಸ್ಯರುಗಳಾದ ಶ್ರೀ.ಕೆ.ಎಲ್.ನಾಗೇಂದ್ರರವರು, ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಎಂ.ಜೆ.ಚಿಕ್ಕಣ್ಣರವರು, ಶ್ರೀ.ಶಂಕರೇಗೌಡರವರು, ಶ್ರೀ.ಎನ್.ನಂಜುಂಡಯ್ಯರವರು, ಶ್ರೀ.ಟಿ.ಎನ್.ಶಂಕರೇಗೌಡರವರು, ಶ್ರೀ.ಲೋಕೇಶ್‌ರವರು, ಶ್ರೀ.ಚಲುವರಾಜುರವರು ಮಾತನಾಡಿ ಶಾಸಕರು ಮಾಡಲಿಲ್ಲವೆಂದ ಮೇಲೆ ನಾವು 19 ಜನ ಸದಸ್ಯರುಗಳು ಸಹಿ ಮಾಡಿ ಸಭೆಯಲ್ಲಿ ಸಲ್ಲಿಸುತ್ತಿರುವ ಪತ್ರದಲ್ಲಿ 11 ಜನರ ಹೆಸರನ್ನು ಸ್ಥಾಯಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲು ಸೂಚಿಸಿದ್ದೇವೆ. ಅದರಂತೆ ನಮ್ಮಗಳ ಬಹುಮತದ ಆಧಾರದ ಮೇಲೆ ಪತ್ರದಲ್ಲಿ ಸೂಚಿಸಿರುವ ಸದಸ್ಯರನ್ನು ಸ್ಥಾಯಿ ಸಮಿತಿಗೆ ಆಯ್ಕೆ ಮಾಡಲು ಕೋರಿ ಸಭೆಗೆ ಪತ್ರವನ್ನು ಸಲ್ಲಿಸಿದರು.

ಶ್ರೀ.ಕೆ.ಎಲ್.ನಾಗೇಂದ್ರರವರು ನೀವು ಆಯ್ಕೆ ಮಾಡದಿದ್ದಲ್ಲಿ ವಿಷಯ ಸಂಖ್ಯೆ:8 ಮತ್ತು 27ಕ್ಕೆ ಸಂಬಂಧಪಟ್ಟಂತೆ ನಾವು ನಮ್ಮ ಅಭಿಪ್ರಾಯವನ್ನು ಬಹುಮತದ ಸದಸ್ಯರು ಬರೆದು ತಿಳಿಸಿರುತ್ತೇವೆ. ಅದರಂತೆ ನಿರ್ಣಯಿಸುವಂತೆ ಒತ್ತಾಯಿಸಿದರು.

ಮಾನ್ಯ ಶಾಸಕರು ಚರ್ಚೆಗೆ ಬಂದಿರುವ ಮುಂದಿನ ವಿಷಯಗಳನ್ನು ಚರ್ಚಿಸಿ ತೀರ್ಮಾನ ತೆಗೆದುಕೊಂಡ ನಂತರ ಸ್ಥಾಯಿ ಸಮಿತಿ ಸದಸ್ಯರ ಆಯ್ಕೆ ಬಗ್ಗೆ ಪ್ರಕಟಿಸುವುದಾಗಿ ತಿಳಿಸಿದರು.

ನಂತರ ಮಾನ್ಯ ಶಾಸಕರು ಸ್ಥಾಯಿ ಸಮಿತಿ ರಚನೆಗಾಗಿ ಸದಸ್ಯರುಗಳನ್ನು ಆಯ್ಕೆ ಮಾಡಲು ನಗರಸಭಾ ಸದಸ್ಯರು ನನಗೆ ಅಧಿಕಾರ ನೀಡಿರುವುದರಿಂದ 11 ಜನ ಸದಸ್ಯರುಗಳ ಹೆಸರುಗಳನ್ನು ಪ್ರಕಟಿಸುತ್ತಿದ್ದೇನೆಂದು ತಿಳಿಸಿ , ಸ್ಥಾಯಿ ಸಮಿತಿಗೆ ಆಯ್ಕೆ ಮಾಡಲಾದ ಸದಸ್ಯರುಗಳ ಹೆಸರನ್ನು ಪ್ರಕಟಿಸಿದರು.

1) ಶ್ರೀ.ಎಸ್.ಪಿ.ಗೌರೀಶ್
2) ಶ್ರೀ.ಎಸ್.ಕೆ.ಶಿವಪ್ರಕಾಶ್ ಬಾಬು
3) ಶ್ರೀಮತಿ:ವಿ.ಎಂ.ಪದ್ಮಾವತಿ
4) ಶ್ರೀ.ಕೆ.ಎಸ್.ಕುಮಾರ್
5) ಶ್ರೀಮತಿ:ಬಿ.ಎನ್.ಸವಿತ
6) ಶ್ರೀ.ಎಸ್.ಪಿ.ಶ್ರೀಧರ
7) ಶ್ರೀ. ಎಂ.ಪಿ. ಅರುಣ್ ಕುಮಾರ್
8) ಶ್ರೀ.ಹೆಚ್.ಸಿ.ಬೋರೇಗೌಡ
9) ಶ್ರೀ.ಎನ್.ನಂಜುಂಡಯ್ಯ
10) ಶ್ರೀ.ಎಂ.ಎನ್.ಚಲುವರಾಜು
11) ಶ್ರೀ.ಖುರಂ ಪಾಷ

ನಂತರ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ನಾವು ಸಲ್ಲಿಸಿರುವ ಪತ್ರದಲ್ಲಿನ ಕೋರಿಕೆಯನ್ನು ಕಾರ್ಯಗತಗೊಳಿಸುವಂತೆ ಒತ್ತಾಯಪಡಿಸಿದರು.

ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು ಮಾತನಾಡಿ ಶಾಸಕರು ಸಲೂಚಿಸಿರುವ ಹೆಸರುಗಳಿಗೆ ನಮ್ಮ ಒಪ್ಪಿಗೆ ಇಲ್ಲವೆಂದರು.

ಸದಸ್ಯರಾದ ಶ್ರೀ.ಎಸ್.ಪಿ.ಶ್ರೀಧರರವರು ಮಾತನಾಡಿ ಮಾನ್ಯ ಶಾಸಕರಿಗೆ ಜವಾಬ್ಧಾರಿ ನೀಡಿದ್ದಾರೆ ಎಲ್ಲರನ್ನು ವಿಶ್ವಾಸಕ್ಕೆ ತೆಗೆದು ಕೊಂಡಿದ್ದಾರೆ. ಸದಸ್ಯರು ಮಾನ್ಯ ಶಾಸಕರ ತೀರ್ಮಾನಕ್ಕೆ ಬದ್ಧ ಎಂದು ಹೇಳಿದ್ದಾರೆ. ಸದಸ್ಯರ ಒಪ್ಪಿಗೆ ಮೇರೆಗೆ ಸ್ಥಾಯಿ ಸಮಿತಿ ಸದಸ್ಯರ ಆಯ್ಕೆ ನಡೆದಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ಮಾತನಾಡಿ ,ಶಾಸಕರು ಸೂಚಿಸಿರುವ ಹೆಸರುಗಳಿಗೆ ನಮ್ಮ ಒಪ್ಪಿಗೆ ಇಲ್ಲ ನಾವು ಕೊಟ್ಟಿರುವ ಪತ್ರದಲ್ಲಿ ತಿಳಿಸಿರುವಂತೆ ಬಹುಮತದ ಆಧಾರದ ಮೇರೆಗೆ ಸ್ಥಾಯಿ ಸದಸ್ಯರನ್ನು ಮಾಡಿ ಎಂದು ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ ಶಾಸಕರಿಗೆ ಸಭೆ ಅಧಿಕಾರ ನೀಡಲಾಗಿದೆ. ಅವರ ಆಯ್ಕೆ ಅಂತಿಮ ಎಂದು ತಿಳಿಸಿ ಸಭೆ ಮುಕ್ತಾಯ ಮಾಡುವಂತೆ ವೇದಿಕೆಯಿಂದ ನಿರ್ಗಮಿಸಿದರು.

ನಂತರ ಶ್ರೀ.ಕೆ.ಎಲ್.ನಾಗೇಂದ್ರರವರು, ಶ್ರೀ.ಶಂಕರೇಗೌಡರವರು, ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಎಂ.ಜೆ. ಚಿಕ್ಕಣ್ಣರವರು, ಶ್ರೀ.ಎನ್.ನಂಜುಂಡಯ್ಯರವರು, ಶ್ರೀ.ಎಂ.ಎನ್. ಚಲುವರಾಜುರವರು, ಶ್ರೀ.ಲೋಕೇಶ್‌ರವರು, ಶ್ರೀ.ಹೆಚ್.ಸಿ.ಬೋರೇಗೌಡರವರು, ಶ್ರೀಮತಿ:ಆಯಿಷಾ ತಬಸೂಮ್ ರವರುಗಳು ಶಾಸಕರ ದಬ್ಬಾಳಿಕೆಗೆ ಧಿಕ್ಕಾರ, ನಗರಸಭಾ

ಅಧ್ಯಕ್ಷರಿಗೆ ದಿಕ್ಕಾರ ಎಂದು ಕೂಗುತ್ತಾ ತಾವು ಸಲ್ಲಿಸಿರುವ ಪತ್ರಕ್ಕೆ ಎಂಡಾರ್ಸ್‌ಮೆಂಟ್ ನೀಡಿ ಎಂದು ಪೌರಾಯುಕ್ತರನ್ನು ಒತ್ತಾಯಪಡಿಸಿದರು.

ನಂತರ ಸಭಾಂಗಣದಿಂದ ಹೊರಗೆ ಬಂದ ಸದಸ್ಯರು ತಮ್ಮ ಪತ್ರಕ್ಕೆ ಎಂಡಾರ್ಸ್‌ಮೆಂಟ್ ನೀಡಲು ಒತ್ತಾಯಿಸಿ ಪೌರಾಯುಕ್ತರ ಕೊಠಡಿ ಮುಂದೆ ಕುಳಿತು ಧರಣಿ ನಡೆಸಿ ಪೌರಾಯುಕ್ತರಿಗೆ ದಿಕ್ಕಾರ ಎಂದು ಕೂಗಿದರು. ನಂತರ ತಮ್ಮ ಪತ್ರದ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಪೌರಾಯುಕ್ತರಿಂದ ಪತ್ರವನ್ನು ಪಡೆದ ನಂತರ ಧರಣಿ ನಿಲ್ಲಿಸಿದರು.

**<u>ವಿಷಯ:9:–</u>** ಮಂಡ್ಯ ನಗರಸಭೆಗೆ ಸೇರಿದ ವಿ.ವಿ.ರಸ್ತೆಯಲ್ಲಿರುವ 6 ಸಂಖ್ಯೆ ಅಂಗಡಿ ಮಳಿಗೆಗಳನ್ನು ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಬಹಿರಂಗ ಹರಾಜು ಮೂಲಕ ವಿಲೇಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:9:–</u>** ಪೌರಾಯುಕ್ತರು ಸಭೆಯಲ್ಲಿ ಯಾವುದೇ ಅನುದಾನದ ಹಾಗೂ ಇನ್ನಿತರ ಯೋಜನೆಗಳಲ್ಲಿ ನಿರ್ಮಿಸಲಾದ ಮಳಿಗೆಗಳನ್ನು ಸರ್ಕಾರದ ಸುತ್ತೋಲೆಯಂತೆ ಬಹಿರಂಗ ಹರಾಜು ಮೂಲಕ ವಿಲೇ ಪಡಿಸಬಹುದಾಗಿದೆ ಎಂದು ತಿಳಿಸಿದರು. ವಿ.ವಿ.ರಸ್ತೆಯಲ್ಲಿರುವ 6 ಸಂಖ್ಯೆ ಮಳಿಗೆಗಳ ಬಗ್ಗೆ ಸದರಿ ಮಳಿಗೆಗಳ ಬಾಡಿಗೆದಾರರು ನ್ಯಾಯಾಲಯದಿಂದ ತರಲಾಗಿದ್ದ ತಡೆಯಾಜ್ಞೆ ತೆರವುಗೊಂಡಿದ್ದು, ಸದರಿ ಮಳಿಗೆಗಳನ್ನು ಬಹಿರಂಗ ಹರಾಜು ಮೂಲಕ ಬಾಡಿಗೆಗೆ ನೀಡಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು.

ಶ್ರೀ.ಕೆ.ಎಲ್.ನಾಗೇಂದ್ರರವರು, ಶ್ರೀ. ಎಂ.ಎಲ್.ಮಂಜನಾಥ್‌ರವರು, ಕಾನೂನು ಸಲಹೆ ಪಡೆದು ಮುಂದಿನ ಕ್ರಮ ವಹಿಸುವಂತೆ ಸೂಚಿಸಿದರು. ಇವರುಗಳ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

**<u>ವಿಷಯ:10:–</u>** ಮಂಡ್ಯ ನಗರ ಘನತ್ಯಾಜ್ಯ ವಸ್ತು ವಿಲೇವಾರಿ ನಿವೇಶನದಲ್ಲಿ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲು ಹೆಚ್ಚುವರಿ ಪರಿಷ್ಕೃತ ಕ್ರಿಯಾ ಯೋಜನೆ ಮಂಜೂರುಮಾಡುವ ಬಗ್ಗೆ

**<u>ನೆಲ ಭರ್ತಿ ನಿವೇಶನದ ಅಭಿವೃದ್ಧಿಗಾಗಿ ಬೇಕಾದ ಅನುದಾನ</u>**

<u>(Funds requirements for Improvements of Land fill site.)</u>

| | | |
|---|---|---|
| 1) | ಚರಂಡಿ ನಿರ್ಮಾಣ (Drains) | ರೂ.100.00ಲಕ್ಷ |
| 2) | ಗುಂಡಿಗಳ ನಿರ್ಮಾಣ ಹಾಗೂ ಲೈನಿಂಗ್ (Pits with lining) 10 Nos. - | ರೂ .65.00ಲಕ್ಷ |
| 3) | ಪೈಪ್ ಲೈನ್ (Pipe line ) - | ರೂ. 15.00ಲಕ್ಷ |
| 4) | ಗಿಡಗಳನ್ನು ನೆಡಿಸಿ ಬೆಳೆಸುವುದು (Plantation) - | ರೂ. 10.00ಲಕ್ಷ |
| 5) | ಹೆಚ್ಚುವರಿ ರಸ್ತೆಗಳ ನಿರ್ಮಾಣ (Roads ) - - | ರೂ. 10.00ಲಕ್ಷ |
| 6) | ಆವರಣ ವಿದ್ಯುದ್ದೀಕರಣ ಕಾಮಗಾರಿ (Lighting ) - | ರೂ 10.00ಲಕ್ಷ |
| 7) | ಹೆಚ್ಚುವರಿ ಕಾಂಪೌಂಡ್ ಗೋಡೆ ನಿರ್ಮಾಣ(Compound Wall) | ರೂ. 5.00ಲಕ್ಷ |
| 8) | ಬೋರ್‌ವೆಲ್ ಕೊರೆದು ಮೋಟರ್ ಅಳವಡಿಸುವುದು –3 ಸಂಖ್ಯೆ ಸರ್ವೀಸ್ ಚಾರ್ಜ್ ಸೇರಿ (Borewell -3 Nos with service Charges )-Escom- | ರೂ. 5.00ಲಕ್ಷ |
| 9) | ವಾಚ್‌ಮನ್ ಶೆಡ್ (Watchmen Shed ) - | ರೂ . 2.5ಲಕ್ಷ |
| 10) | ಲಿಚೆಟ್ ಪಿಟ್ಸ್ (Lichet Pits ) | ರೂ. 2.5ಲಕ್ಷ |
| 11) | ಈಗಾಗಲೇ ವಿನಿಯೋಗಿಸಿರುವ ಅನುದಾನ (Compound wall, Roads, C.D.,Drain works) | ರೂ. <u>43.60</u>ಲಕ್ಷ |
| | ಒಟ್ಟು Total | ರೂ..<u>268.60</u>ಲಕ್ಷ |

| | | |
|---|---|---|
| ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ | ರೂ. | 100.60ಲಕ್ಷ |
| ಖರ್ಚಾಗಿರುವುದು. | – ರೂ. | 43.60ಲಕ್ಷ |
| ಉಳಿಕೆ | ರೂ. | 57.00ಲಕ್ಷ |

(ದಿನಾಂಕ:19–7–2008ರ ಕೌನ್ಸಿಲ್ ಸಾಮಾನ್ಯ ಅಧಿವೇಶನದ ವಿಷಯ ಸಂಖ್ಯೆ:41(19)ರಂತೆ ಚರ್ಚೆಗೆ ಮಂಡಿಸಿ ಮುಂದಿನ ಸಭೆಗೆ ತಂದು ತೀರ್ಮಾನ ಕೈಗೊಳ್ಳುವುದೆಂದು ಮುಂದೂಡಿದ ವಿಷಯ).

**ತೀರ್ಮಾನ:10:–** ಮಾನ್ಯ ಶಾಸಕರು ಮಾತನಾಡಿ 3ನೇ ಪಾರ್ಟಿ ತಪಾಸಣೆ ಮಾಡಿಸಿದ ನಂತರ ಕಾಮಗಾರಿ ಬಿಲ್ ಪಾವತಿ ಮಾಡಿವಂತೆ ತಿಳಿಸಿದರು. ನಂತರ ಕ್ರಿಯಾ ಯೋಜನೆಯನ್ನು ಮಂಜೂರುಮಾಡುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು. ಹಾಗೂ ಹಾಲಿ ಇರುವ ಘನತ್ಯಾಜ್ಯ ವಸ್ತುಗಳನ್ನು (ಅಡ್ಡಾದಿಡ್ಡಿ ಬಿದ್ದಿರುವ ) ಪಿಟ್‌ಗಳನ್ನು ತೆಗೆದು ಪಿಟ್‌ನಲ್ಲಿ ಸಂಗ್ರಹಿಸುವಂತೆ ತೀರ್ಮಾನಿಸಲಾಯಿತು.

**ವಿಷಯ:11:–** ಮಂಡ್ಯ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಗೂಡ್ಸ್ ಟೆಂಪೋಗಳನ್ನು ನಿಲ್ಲಿಸುತ್ತಿರುವುದನ್ನು ತಡೆಗಟ್ಟಲು ಪ್ರತ್ಯೇಕ ಟೆಂಪೋ ನಿಲ್ದಾಣ ನಿರ್ಮಿಸಿ ಹಾಗೂ ಉದ್ಯಾನವನ ಅಭಿವೃದ್ಧಿಪಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:11:–** ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡಿ ಸಿಲ್ವರ್ ಜ್ಯೂಬಿಲಿ ಪಾರ್ಕ್‌ಗೆ ಇತಿಹಾಸ ಇದೆ. ಸದರಿ ಪಾರ್ಕ್‌ನಲ್ಲಿ ಸಭೆ ಸಮಾರಂಭಗಳನ್ನು ನಡೆಸಲು ಹಿಂದಿನಿಂದಲೂ ಬಳಕೆ ಮಾಡಿಕೊಂಡು ಬಂದಿರುವುದರಿಂದ ಸಭೆ ಸಮಾರಂಭಗಳಿಗೆ ಪಾರ್ಕ್ ಅವಶ್ಯಕತೆ ಇದೆ. ಅದೇ ರೀತಿ ಒಂದು ನಗರ ಅಂದ ಮೇಲೆ ಸಾರಿಗೆ ಸಂಪರ್ಕ ಅತಿ ಮುಖ್ಯ. ಪಾದಚಾರಿ ರಸ್ತೆಗಳಲ್ಲಿ ಟೆಂಪೋಗಳನ್ನು ನಿಲ್ಲಿಸುವುದು ಸರಿಯಲ್ಲ. ಆದ್ದರಿಂದ ಟೆಂಪೋ ನಿಲ್ದಾಣಕ್ಕಾಗಿ ಒಂದು ಸೂಕ್ತ ಸ್ಥಳಾವಕಾಶ ಮಾಡಿಕೊಟ್ಟು ಅಗತ್ಯ ಸೌಕರ್ಯಗಳನ್ನು ಮಾಡಿಕೊಡಬೇಕು ಹಾಗೂ ಸಿಲ್ವರ್ ಜ್ಯೂಬಿಲಿ ಪಾರ್ಕ್ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದು. ಈ ಬಗ್ಗೆ ಮಾನ್ಯ ಶಾಸಕರು, ಅಧ್ಯಕ್ಷರು ಮತ್ತು ಪೌರಾಯುಕ್ತರು ಸೇರಿ ಟೆಂಪೋ ಮಾಲೀಕರ ಸಂಘದ ಪದಾಧಿಕಾರಿಗಳೊಡನೆ ಸಮಾಲೋಚಿಸಿ ಪರ್ಯಾಯ ಜಾಗ ಒದಗಿಸಿ ಅಗತ್ಯ ಸೌಕರ್ಯಗಳನ್ನು ಮಾಡಿಕೊಡಲು ಸೂಚಿಸಿದರು.

ಸದಸ್ಯರಾದ ಶ್ರೀ.ಶಂಕರೇಗೌಡರವರು, ಶ್ರೀ.ಎಂ.ಎಲ್.ಮಂಜುನಾಥ್‌ರವರು, ಶ್ರೀ.ಎನ್.ನಂಜುಂಡಯ್ಯರವರು ಮಾತನಾಡಿ ಟೆಂಪೋ ಸ್ಟ್ಯಾಂಡ್‌ಗಾಗಿ ಕೆರೆ ಹತ್ತಿರ ಬೇರೆ ಜಾಗ ಇದೆ ಆದರೆ ನಗರದ ಹೃದಯ ಭಾಗದಲ್ಲಿ ಕೊಡುವುದು ಬೇಡ ವೆಂದು ಸೂಚಿಸಿದರು.

ಮೇಲ್ಕಂಡ ಸಲಹೆ ಸೂಚನೆಗಳನ್ನು ಸಭೆಯು ಒಪ್ಪಿ ಅನುಮೋದಿಸಲಾಯಿತು.

**ವಿಷಯ:12:–** ವಾರ್ಡ್ ನಂಬರ್:28ರ ಸದಸ್ಯರಾದ ಶ್ರೀ.ಕೆ.ಎಸ್.ಕುಮಾರ್ ರವರು ಗುತ್ತಲು ರಸ್ತೆ ಪೆಟ್ರೋಲ್ ಬಂಕ್ ಹಿಂಭಾಗದ ರಸ್ತೆಯಲ್ಲಿ ಬೀದಿ ದೀಪಗಳಿಲ್ಲದೇ ಸಾರ್ವಜನಿಕರು ತಿರುಗಾಡಲು ತೊಂದರೆಯಾಗಿರುವುದರಿಂದ ವಿದ್ಯುತ್ ಕಂಬ ಅಳವಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಸೆಸ್ಕಾಂ, ಮಂಡ್ಯ ನಗರ ಉಪ ವಿಭಾಗ, ಮಂಡ್ಯರವರಿಗೆ ಅಂದಾಜು ತಯಾರಿಸಿರುವ ಮೊತ್ತ ರೂ.9,024/–ಗಳನ್ನು ಪಾವತಿಸುವ ವಿಚಾರ.

**ತೀರ್ಮಾನ:12:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:13:–** ವಾರ್ಡ್ ನಂಬರ್:27ರ ಸದಸ್ಯರಾದ ಶ್ರೀ.ಟಿ.ಎನ್.ಶಂಕರೇಗೌಡರವರಿಂದ ಬಂದಿರುವ ವಿಚಾರ.
ವಿ.ವಿ.ಪುರಂ ಬಡಾವಣೆಯ ಒಂದನೇ ತಿರುವಿನಲ್ಲಿ ಕೆಂಪೇಗೌಡರ ಮನೆ ಮುಂಭಾಗದ ರಸ್ತೆ ಮಧ್ಯಭಾಗದಲ್ಲಿ ವಿದ್ಯುತ್ ಕಂಬ ಇದ್ದು ರಸ್ತೆ ಅಭಿವೃದ್ಧಿ ಆದನಂತರ ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವುದರಿಂದ ಸ್ಥಳಾಂತರಿಸಲು ತಗಲುವ ವೆಚ್ಚವನ್ನು ಭರಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:13:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:14:–**ಮಾನ್ಯ ಸದಸ್ಯರುಗಳಾದ ಶ್ರೀ.ಹೆಚ್.ಸಿ.ಬೋರೇಗೌಡರವರು, ಶ್ರೀಮತಿ:ಕೆ.ಎಲ್.ಶಾರದಮ್ಮರವರು ಮತ್ತು ಹೊಸಹಳ್ಳಿ ಬಡಾವಣೆಯ ಸಾರ್ವಜನಿಕರು ಮನವಿ ಸಲ್ಲಿಸಿರುವ ಮೇರೆಗೆ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ರೂ.1,48.000/–ಗಳ ಅಂದಾಜು ವೆಚ್ಚವಾಗಿರುತ್ತದೆ. ಈಗಾಗಲೇ ಸ್ವಲ್ಪ ಹಣವನ್ನು ವಿದ್ಯುತ್ ಮಂಡಳಿಗೆ ಪಾವತಿಸಿದ್ದು ಇನ್ನು ಉಳಿಕೆ ಮೊತ್ತ ರೂ.41,000/–ಗಳನ್ನು ಪಾವತಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:14:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:15:–** ವಾರ್ಡ್ ನಂಬರ್:20, ಹಾಲಹಳ್ಳಿ ನ್ಯೂ ತಮಿಳು ಕಾಲೋನಿ ಸ್ಲಂ ಪ್ರದೇಶದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ ಬೀದಿ ದೀಪಗಳ ವ್ಯವಸ್ಥೆ ಮಾಡಿಕೊಡಬೇಕೆಂದು ವಾರ್ಡ್ ಸದಸ್ಯರಾದ ಶ್ರೀಮತಿ: ಕಲ್ಯೆಅರಸಿರವರಿಂದ ಬಂದಿರುವ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:15:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:16:–**ಮಂಡ್ಯ ನಗರಸಭೆ ವ್ಯಾಪ್ತಿಯ ಕುವೆಂಪುನಗರ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದು ಕೌನ್ಸಿಲ್ ನಿರ್ಣಯ ಸಂಖ್ಯೆ:155 ದಿನಾಂಕ:13–12–77 ಮತ್ತು ಸಿ.ಆರ್.ನಂಬರ್:351 ದಿನಾಂಕ:7–12–1985 ಹಾಗೂ ಸರ್ಕಾರದ ಆದೇಶ ಸಂಖ್ಯೆ(1) ವನಇ/90/ಎಂಐಪಿ/79 ದಿನಾಂಕ:21–12–79 ಮತ್ತು (2)ವನಇ/132/ಎಂಐಪಿ/84 ದಿನಾಂಕ:17–1–1986ರಂತೆ ಹಕ್ಕು ಪತ್ರ ನೀಡಿದ್ದು ನಿವೇಶನ ಸಂಖ್ಯೆ:215 ರಿಂದ 230 ರವರೆಗೆ 16 ನಿವೇಶನಗಳ ಅಳತೆ ಪೂರ್ವ–ಪಶ್ಚಿಮ: 30(ಮೂವತ್ತು) ಅಡಿಗಳು, ದಕ್ಷಿಣ–ಉತ್ತರ :40(ನಲವತ್ತು) ಅಡಿಗಳು ಎಂಬುದಾಗಿ ನಕ್ಷೆ ಮಂಜೂರಾತಿ ರೀತ್ಯಾ ಇರುತ್ತದೆ. ಆದರೆ ಹಾಲಿ ಸ್ಥಳದಲ್ಲಿ ಲಭ್ಯವಿರುವಂತೆ ಪೂರ್ವ–ಪಶ್ಚಿಮ: 40(ನಲವತ್ತು)ಅಡಿಗಳು, ಉತ್ತರ–ದಕ್ಷಿಣ:30(ಮೂವತ್ತು) ಅಡಿಗಳು ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳಲು ಒಪ್ಪಿಗೆ ನೀಡತಕ್ಕ ವಿಚಾರ.
**ತೀರ್ಮಾನ:16:–** ಕಾನೂನು ಅನುಸರಿಸಿ ತಿದ್ದುಪಡಿ ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:17:–**ಮಂಡ್ಯ ನಗರಸಭೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ನಿವೃತ್ತಿ ಹೊಂದಿರುವ ಶ್ರೀ.ಕೆ.ಟಿ. ಗಿಡ್ಡಪ್ಪರವರ ಪತ್ನಿ ಶ್ರೀಮತಿ:ಸುಶೀಲಮ್ಮರವರ ವೈದ್ಯಕೀಯ ವೆಚ್ಚದ ಬಾಬ್ತು ರೂ.71,437/–ಗಳನ್ನು ಮರು ಪಾವತಿಸಲು ಕೋರಿರುವುದರಿಂದ, ಪಾವತಿಸಲು ಒಪ್ಪಿಗೆ ನೀಡತಕ್ಕ ವಿಚಾರ.
**ತೀರ್ಮಾನ:17:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.
**ವಿಷಯ:18:–** ಘನತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು ವಿವಿಧ ಸ್ಪರ್ಧೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಮತ್ತು ಇತರೆ ವೆಚ್ಚಗಳಿಗೆ ಬೇಕಾಗುವ ಹಣವನ್ನು ನಗರಸಭಾ ನಿಧಿಯಿಂದ ಭರಿಸುವುದು ನಂತರ 12ನೇ ಹಣಕಾಸು ಯೋಜನೆಯಡಿಯಲ್ಲಿ ಬಿಡುಗಡೆಯಾಗುವ ಮೊತ್ತವನ್ನು ನಗರಸಭಾ ನಿಧಿಗೆ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.
**ತೀರ್ಮಾನ:18:–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.
**ವಿಷಯ:19:–** ಮಂಡ್ಯ ನಗರಸಭಾಧ್ಯಕ್ಷರ ಕಾರು ಹಳೆಯದಾಗಿದ್ದು ಆಗಿಂದಾಗ್ಗೆ ದುರಸ್ತಿಗೆ ಬರುತ್ತಿರುವುದರಿಂದ ಸದರಿ ಕಾರನ್ನು ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ ಕೆಲಸಕಾರ್ಯಗಳ ನಿಮಿತ್ತ ಉಪಯೋಗಿಸಿಲು ಅನುವು ಮಾಡಿಕೊಟ್ಟು ನಗರಸಭಾಧ್ಯಕ್ಷರಿಗೆ ಹೊಸದಾಗಿ ಒಂದು ಸಂಖ್ಯೆ ಅಂಬಾಸಿಡರ್ ಕಾರನ್ನು ಖರೀದಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:19:–** ಸದಸ್ಯರಾದ ಶ್ರೀ.ಎಸ್.ಪಿ.ಗೌರೀಶ್ ಮತ್ತು ಶ್ರೀ.ಎಸ್.ಕೆ.ಶಿವಪ್ರಕಾಶ್ ಬಾಬುರವರು ಒಪ್ಪಿಗೆ ಸೂಚಿಸಿದರು. ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಕಾನೂನಲ್ಲಿ ಅವಕಾಶವಿದ್ದರೆ ನಿಯಮಾನುಸಾರ ಕ್ರಮ ವಹಿಸಲು ತಿಳಿಸಿದರು.

ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಳೆ ಕಾರ್ ಉಪಯೋಗಿಸಲು ಯೋಗ್ಯವಲ್ಲವೆಂದು (ಕಂಡಂ ಎಂದು) ದೃಢೀಕರಣ ನೀಡಿದ್ದಾರೆಯೇ ಎಂದು ಕೇಳಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡಿ ಬಾಡಿಗೆ ನೀಡುವುದರ ಬದಲು ಹೊಸ ವಾಹನವನ್ನು ಖರೀದಿಸುವುದು ಸೂಕ್ತವೆಂದು ತಿಳಿಸಿದರು.

ಅಂತಿಮವಾಗಿ ನಗರಸಭಾ ಅಧ್ಯಕ್ಷರಿಗೆ ಹೊಸದಾಗಿ ಒಂದು ಅಂಬಾಸಿಡರ್ ಕಾರನ್ನು ನಿಯಮಾನುಸಾರ ಖರೀದಿಸುವುದೆಂದು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.
**ವಿಷಯ:20:–**(ಎ) ಮಾನ್ಯ ಶಾಸಕರ ಸೂಚನೆಯಂತೆ ಎ.ಪಿ.ಎಂ.ಸಿ.ಕಛೇರಿ ಹಿಂಭಾಗದ ರಸ್ತೆಗೆ ವಿದ್ಯುತ್ ಕಂಬ ಹಾಕಿಸಿ ಲೈನ್ ಅಳವಡಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.
(ಬಿ) ಎ.ಪಿ.ಎಂ.ಸಿ.ರಸ್ತೆಯ ಪೂರ್ವಕ್ಕೆ ಇರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ವಿಚಾರ. ಅಂದಾಜು ವೆಚ್ಚ ರೂ. 2.00ಲಕ್ಷ
**ತೀರ್ಮಾನ::20:–** ಸರ್ವಾನುಮತದಿಂದ ಒಪ್ಪಲಾಯಿತು.
**ವಿಷಯ:21:–** ಕಲ್ಲಹಳ್ಳಿ ಹಳೇ ಊರಿನಿಂದ ಕಿರಗಂದೂರು ರಸ್ತೆಯವರೆಗೆ (ಎಂ.ಸಿ.ರಸ್ತೆವರೆಗೆ) ವಿದ್ಯುತ್ ಕಂಬ ಹಾಕಿಸಿ ಲೈನ್ ಅಳವಡಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.
**ತೀರ್ಮಾನ:21:–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:22:–** ದಿನಾಂಕ:23–7–2008ರಂದು ನಿರ್ಗಮಿತ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಂಡ್ಯ ಕ್ಷೇತ್ರದ ಮಾನ್ಯ ಶಾಸಕರಿಗೆ ಪೌರ ಸನ್ಮಾನ ಕಾರ್ಯಕ್ರಮಕ್ಕೆ ವೆಚ್ಚ ಮಾಡಿರುವುದರ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:22:–** ಸರ್ವಾನುಮತದಿಂದ ಒಪ್ಪಲಾಯಿತು ಹಾಗೂ ರೂ.25,000/–ಗಳ ವೆಚ್ಚದಲ್ಲಿ ಸನ್ಮಾನ ಕಾರ್ಯಕ್ರಮಕ್ಕೆ ಖರ್ಚು ಮಾಡಿರುವುದನ್ನು ಒಪ್ಪಲಾಯಿತು.

**ವಿಷಯ:23:–** ವಾರ್ಡ್ ನಂಬರ್:33ರ ಸದಸ್ಯರಾದ ಶ್ರೀಮತಿ:ವಿ.ಎಂ.ಪದ್ಮಾವತಿರವರು ಸ್ವರ್ಣಸಂದ್ರ ಶನಿದೇವರ ದೇವಸ್ಥಾನದ 6ನೇ ಕ್ರಾಸ್‌ನಲ್ಲಿರುವ ವಿದ್ಯುತ್ ಕಂಬ ತುಂಬಾ ಹಳೆಯದಾಗಿದ್ದು ಕೆಳಗೆ ಬಿದ್ದುಹೋಗಿರುವುದರಿಂದ, ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ ಹೊಸದಾಗಿ ಒಂದು ವಿದ್ಯುತ್ ಕಂಬವನ್ನು ಹಾಕಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:23:–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:24:–** ಮಂಡ್ಯ ನಗರದ ಷುಗರ್ ಟೌನ್ ಓಲ್ಡ್ ಎಂ.ಸಿ.ರಸ್ತೆಯಲ್ಲಿರುವ ಹರಿಶ್ಚಂದ್ರ ಸ್ಮಶಾನದಲ್ಲಿ ಗಿಡ ಮರಗಳು ಬೆಳೆದು ಶವ ಸಂಸ್ಕಾರ ಮಾಡಲು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಅವುಗಳನ್ನು ತೆಗೆಸಿ ಅಭಿವೃದ್ಧಿಪಡಿಸಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ::24:–** ಸರ್ವಾನುಮತದಿಂದ ಒಪ್ಪಲಾಯಿತು. ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಸ್ಮಶಾನದಲ್ಲಿ ಅವಶ್ಯಕತೆ ಇರುವ ಕಾಮಗಾರಿಗಳನ್ನು ನಿರ್ವಹಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:25:–** ಕಲ್ಲಹಳ್ಳಿ 13ನೇ ಕ್ರಾಸ್‌ನಲ್ಲಿರುವ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಕಾರ್ಯನಿರ್ವಹಕ ಇಂಜಿನಿಯರ್ ರವರ ಕಛೇರಿ, ಪಾಲನೆ ಮತ್ತು ನಿರ್ವಹಣೆ ಹೆಚ್ಚುವರಿ ವಿಭಾಗ, ಮಂಡ್ಯರವರ ಪತ್ರ ದಿನಾಂಕ:16–4–2008 ರಂತೆ ತಗಲುವ ಅಂದಾಜು ವೆಚ್ಚ ರೂ.62,980/–ಗಳನ್ನು ಪಾವತಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:25:–** ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:26:–** ಮಾನ್ಯ ಶಾಸಕರ ಸೂಚನೆಯಂತೆ ಸ್ವಚ್ಛತಾ ಕಾಮಗಾರಿಯ ಗುತ್ತಿಗೆದಾರರಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:26:–** ಮಾನ್ಯ ಶಾಸಕರು ಮಾತನಾಡಿ ಕಾರ್ಮಿಕರು 5 ಬೇಡಿಕೆಗಳನ್ನು ಇಟ್ಟಿದ್ದಾರೆ. ಮೈಸೂರು ಮತ್ತು ಮದ್ದೂರಿನಲ್ಲಿ ಮತ್ತು ಬೇರೆ ಕಡೆ ಕೊಟ್ಟಿರುತ್ತಾರೆ ಈ ಸಂಬಂಧ ಮಾಹಿತಿಗಳನ್ನು ತರಿಸಿಕೊಂಡು ಮಾಡಿ ಎಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ ಎಂದು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಕಾರ್ಮಿಕ ಕಾಯ್ದೆ ಅನ್ವಯ ಕನಿಷ್ಠ ದರ ರೂ.1800/–ಗಳನ್ನು ಕೊಡಬೇಕಾಗಿದೆ ಆದರೆ ಗುತ್ತಿಗೆದಾರರು ಈಗ ರೂ.2400/–ಗಳನ್ನು ಪಾವತಿಸುತ್ತಿದ್ದಾರೆ ಎಂದು ತಿಳಿಸಿದರು.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡಿ ನಗರ ಸ್ವಚ್ಛತಾ ಕೆಲಸ ಬಹಳ ಮುಖ್ಯವಾದದ್ದು. ಸದರಿ ಕೆಲಸವನ್ನು ಖಾಸಗಿ ಗುತ್ತಿಗೆದಾರರಿಗೆ ವಹಿಸಲಾಗಿದೆ. ಗುತ್ತಿಗೆದಾರರು ಮತ್ತು ಕಾರ್ಮಿಕರ ನಡುವೆ ವೇತನ ಹೆಚ್ಚಿಸುವ ಬಗ್ಗೆ ಉದ್ಭವವಾಗಿರುವ ಸಮಸ್ಯೆಯಾಗಿರುತ್ತದೆ. ಆದ್ದರಿಂದ ಕಾರ್ಮಿಕರಿಗೆ ವೇತನ ಹೆಚ್ಚಳದ ಬಗ್ಗೆ ಗುತ್ತಿಗೆದಾರರೊಡನೆ ಚರ್ಚಿಸಿ ಕ್ರಮ ಕೈಗೊಳ್ಳುವುದೆಂದು ಸೂಚಿಸಿದರು.

ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಮಾತನಾಡಿ ಇದು ನಗರಸಭೆಗೆ ಸಂಬಂಧಿಸಿದ್ದಲ್ಲ. ಗುತ್ತಿಗೆದಾರರು ಮತ್ತು ಕಾರ್ಮಿಕರ ನಡುವೆ ಇರುವ ಸಮಸ್ಯೆಯಾಗಿದೆ. ನಾಳೆ ಬೇರೆಯವರು ಇದೇ ರೀತಿ ನಗರಸಭೆಯನ್ನೇ ಹೊಣೆ ಮಾಡಿ ಹೆಚ್ಚಿಗೆ ಕೇಳುತ್ತಾರೆ. ಆದ್ದರಿಂದ ಗುತ್ತಿಗೆದಾರರು ಮತ್ತು ಕಾರ್ಮಿಕ ಸಂಘದ ಪದಾಧಿಕಾರಿಗಳೊದನೆ ಮಾನ್ಯ ಶಾಸಕರು, ನಗರಸಭಾಧ್ಯಕ್ಷರು ಮತ್ತು ಪೌರಾಯುಕ್ತರು ಚರ್ಚಿಸಿ ಸ್ವಚ್ಛನಾ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ವೇತನ ಹೆಚ್ಚಿಸಿ ಅನುಕೂಲ ಮಡಿಕೊಡುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡುವಂತೆ ಸೂಚಿಸಿದರು. ಶ್ರೀ.ಕೆ.ಎಲ್.ನಾಗೇಂದ್ರರವರ ಸೂಚನೆಯನ್ನು ಸಭೆಯು ಒಪ್ಪಿ ಅನುಮೋದಿಸಿತು.

**ವಿಷಯ:27:–** ಮಂಡ್ಯ ನಗರಸಭೆಯಿಂದ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:27:–** ನಗರಸಭಾ ಸದಸ್ಯರು ಮಾನ್ಯ ಶಾಸಕರಿಗೆ ನೀಡಿದ ಅಧಿಕಾರವನ್ನು ಉಪಯೋಗಿಸಿಕೊಂಡು ಶ್ರೀ.ಎಂ.ಜೆ.ಚಿಕ್ಕಣ್ಣ, ನಗರಸಭಾ ಸದಸ್ಯರನ್ನು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಸೂಚಿಸಿದರು. ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28:–** ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು.

**ವಿಷಯ:28(1):–** ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಮಂನಪ್ರಾ/ನಯೋವಿ ನಕ್ಷೆ/625/2007–08 ದಿನಾಂಕ: 29–4–2008ರಂತೆ ಮಂಡ್ಯ ನಗರದ ಹಳೇ ಹನಿಯಂಬಾಡಿ ರಸ್ತೆಯಿಂದ ಜಿಲ್ಲಾ ಆಸ್ಪತ್ರೆ ರಸ್ತೆಗೆ ಸಂಪರ್ಕ ಕಲ್ಪಿಸುವ ಕಾಮಗಾರಿ ಅಂದಾಜು ಮೊತ್ತ ರೂ.10.00ಲಕ್ಷಗಳಿಗೆ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:28(1):–** ಸ್ಥಳ ಪರಿಶೀಲನೆ ಮಾಡಿಸಿ ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:28(2):–**ಸದಸ್ಯರಾದ ಶ್ರೀಮತಿ:ಎಸ್.ಆಯಿಷಾ ತಬಸೂಮ್ ರವರಿಂದ ಬಂದ ವಿಷಯ. ವಾರ್ಡ್ ನಂಬರ್: 26ರಲ್ಲಿ ಶ್ರೀ.ಮಹೇಶ್ ಎಂಬುವರು ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿ ರಸ್ತೆಯ ಜಾಗವನ್ನು ಅತಿಕ್ರಮಿಸಿರುತ್ತಾರೆ. ಇದರಿಂದಾಗಿ ಸಾರ್ವಜನಿಕರು ತಿರುಗಾಡಲು ರಸ್ತೆ ಇಲ್ಲದಂತಾಗಿ ತೊಂದರೆಯಾಗುತ್ತಿರುವುದರಿಂದ ರಸ್ತೆಯನ್ನು ತೆರವು ಮಾಡಿಸಿಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:28(2):–** ಸದಸ್ಯರಾದ ಶ್ರೀಮತಿ: ಆಯಿಷಾ ತಬಸೂಮ್ ರವರು ವಿಷಯದ ಬಗ್ಗೆ ಚರ್ಚಿಸುತ್ತಾ ಲೈಸೆನ್ಸ್ ಪಡೆಯದೇ ಕಟ್ಟಡ ಕಟ್ಟಿರುತ್ತಾರೆಂದು ತಿಳಿಸಿದ್ದರೂ ಸಹ ಕ್ರಮ ಕೈಗೊಡಿರುವುದಿಲ್ಲವೆಂದು ಆಕ್ಷೇಪಿಸಿದರು.

ಪೌರಾಯುಕ್ತರು ಮಾತನಾಡಿ ಈ ಬಗ್ಗೆ ಈಗಾಗಲೇ ನಗರಸಭೆ ವತಿಯಿಂದ ಕಟ್ಟಡ ತೆರವುಗೊಳಿಸಿ ಮುಂದೆ ಕಟ್ಟಡ ನಿರ್ಮಿಸದಂತೆ ತಡೆಯಲು ಪೋಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು

ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು ಮತ್ತು ಶ್ರೀ.ಶಂಕರೇಗೌಡರವರು ಕಟ್ಟಡದ ಮಾಲೀಕರನ್ನು ಕರೆಸಿ ಚರ್ಚಿಸಿ ಅವರಿಂದ ಜಾಗವನ್ನು ರಸ್ತೆಗಾಗಿ ಬಿಡಿಸಿಕೊಂಡು ಅವರ ಜಾಗವನ್ನು ಪಡೆಯಬೇಕಾದಲ್ಲಿ ನಿಯಮಾನುಸಾರ ಅವರಿಗೆ ಪರಿಹಾರ ಕೊಟ್ಟು ರಸ್ತೆ ಮಾಡಿಸಲು ಸೂಚಿಸಿದರು. ಸದರಿಯವರ ಸೂಚನೆಯನ್ನು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:28(3):–** ನೆಹರುನಗರ ಪೂರ್ವ ಬಡಾವಣೆಯಲ್ಲಿರುವ ಶ್ರೀ ಚಲುವಯ್ಯ ಉದ್ಯಾನವನವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅಭಿವೃದ್ಧಿಪಡಿಸಲು ತೋಟಗಾರಿಕೆ ಇಲಾಖೆಗೆ ವಹಿಸಿಕೊಡುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:28(3):–** ತೋಟಕಾರಿಕೆ ಅಧಿಕಾರಿಗಳೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:28(4):–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರ ಸಂಖ್ಯೆ:ಕಜಮಂ/ವಿಭಾಗ/ಮಂಡ್ಯ.ಸ–1/ಕಸ/54/600/2008–09 ದಿನಾಂಕ:11–8–2008ರಂತೆ ಲೇಬರ್ ಕಾಲೋನಿಯ 4ನೇ ಕ್ರಾಸ್ ರಸ್ತೆಯಲ್ಲಿ ಬೋರ್‌ವೆಲ್ ಕೊರೆಯುವ ಬಗ್ಗೆ ಸದರಿ ಅಂದಾಜನ್ನು ಎಸ್.ಎಫ್.ಸಿ.ಅನುದಾನದಡಿ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:28(4):–** ಈ ಹಿಂದೆ ನಗರಸಭೆಯಿಂದ ನೀಡಿರುವ ಉಳಿಕೆ ಎಸ್.ಎಫ್.ಸಿ.ಅನುದಾನದಲ್ಲಿ ನಿರ್ವಹಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(5):–** ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯರವರ ಪತ್ರ ಸಂಖ್ಯೆ:ಕಜಮ/ಸಕಾಅ/ನಿಉವಿ/354/2008–09 ದಿನಾಂಕ:2–8–2008ರಂತೆ ಮಂಡ್ಯ ನಗರ ವ್ಯಾಪ್ತಿಯಲ್ಲಿ ನೀರಿನ ದರವನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:28(5):–** ಸಭೆಯಲ್ಲಿ ಮಾನ್ಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು ಮಂಡಳಿ ಅಧಿಕಾರಿಗಳೊಡನೆ ಸುಧೀರ್ಘವಾಗಿ ಚರ್ಚಿಸಿದರು. ನಂತರ ಶ್ರೀ.ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡಿ ಮೀಟರ್‌ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಮತ್ತು ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕೆಂಬ ಷರತ್ತಿಗೊಳಪಡಿಸಿ, ರೂ.45–00 ರಿಂದ ರೂ.70–00 (ಎಪ್ಪತ್ತು ರೂಪಾಯಿ)ಗಳಿಗೆ ನಿಗಧಿಪಡಿಸುವುದೆಂದು ಸೂಚಿಸಿದರು.

ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ರೂ.45–00 ರಿಂದ ರೂ.70–00 ಗಳಿಗೆ ನೀರಿನ ದರ ಹೆಚ್ಚಿಸುವುದಕ್ಕೆ ನನ್ನ ವಿರೋಧವಿದೆ. ಮಂಡ್ಯ ನಗರ ಕೈಗಾರಿಕೆಗಳು ಇರುವ ಅಭಿವೃದ್ಧಿ ಹೊಂದಿದ ಪ್ರದೇಶವಲ್ಲ. ಆದ್ದರಿಂದ 55–00 ರೂಪಾಯಿಗಳಿಗೆ ಹೆಚ್ಚಿಸಬಹುದೆಂದು ಸೂಚಿಸಿದರು.

ಅಂತಿಮವಾಗಿ ಮಾಹೆಯಾನ ರೂ.70–00 (ಎಪ್ಪತ್ತು ರೂಪಾಯಿಗಳು) ನೀರಿನ ತೆರಿಗೆ ನಿಗಧಿಪಡಿಸಲು ಸಭೆಯಲ್ಲಿ ಒಪ್ಪಲಾಯಿತು.

**ವಿಷಯ:28(6):–** ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆ (ಐ.ಡಿ.ಎಸ್.ಎಂ.ಟಿ.)ಯಡಿಯಲ್ಲಿ ಪಬ್ಲಿಕ್ ಪಾರ್ಟಿ ಪಾರ್ಟ್‌ನರ್‌ಷಿಪ್ ಅಡಿಯಲ್ಲಿ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಲು ಪ್ರಸ್ತಾವನೆ ಕಳುಹಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:28(6):–** ಸಂಪೂರ್ಣ ಮಾಹಿತಿಗಳೊಂದಿಗೆ ಮುಂದಿನ ಸಭೆಗೆ ತರುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ:28(7):–** ಮಂಡ್ಯ ನಗರಸಭೆಯಿಂದ ಆಶ್ರಯ ನಿವೇಶನ ಹಂಚಿಕೆ ಮಾಡಿರುವ ನಿವೇಶನಗಳಿಗೆ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಅಂದಾಜು ಮೊತ್ತ ರೂ.1,24,796/–ಗಳನ್ನು ಸೆಸ್ಕಾಂ ರವರಿಗೆ ಪಾವತಿಸುವುದರ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:28(7):–** ಒಪ್ಪಲಾಯಿತು. ಇದೇ ರೀತಿ ನೀರು ಸರಬರಾಜು ವ್ಯವಸ್ಥೆಯನ್ನು ಸಹ ಮಾಡಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:28(8):–** ಮಂಡ್ಯ ನಗರಸಭೆ ವ್ಯಾಪ್ತಿಯೊಳಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ಮಿಸಲಾಗಿರುವ ಕೆಲವು ಮ್ಯಾನ್‌ಹೋಲ್ ಚೇಂಬರ್‌ಗಳ ಶಿಥಿಲವಾಗಿದ್ದು ಅವುಗಳನ್ನು ರಸ್ತೆ ಮೇಲ್ಮಟ್ಟಕ್ಕೆ ಎತ್ತರಿಸಿ ಮ್ಯಾನ್ ಹೋಲ್ ಚೇಂಬರ್ ಹೆವಿ ಡ್ಯೂಟಿ ಮತ್ತು ಮೀಡಿಯಮ ಡ್ಯೂಟಿ ಮುಚ್ಚಳಗಳನ್ನು ಖರೀದಿಸಲು ವಾರ್ಷಿಕ ಟೆಂಡರ್ ಕರೆಯುವುದರ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:28(8):–** ವಾರ್ಷಿಕ ಟೆಂಡರ್ ಕರೆದು ಖರೀಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(9):–** ವಾರ್ಡ್ ನಂಬರ್:34ರ ಸದಸ್ಯರಾದ ಶ್ರೀಮತಿ:ಬಿ.ಎನ್.ಸವಿತರವರಿಂದ ಬಂದಿರುವ ವಿಷಯ: ಚಿಕ್ಕೇಗೌಡನದೊಡ್ಡಿಯಲ್ಲಿ ಕಾಮಗಾರಿ ಕೆಲಸ ನಿರ್ವಹಿಸುತ್ತಿದ್ದು ಕೆಲವು ರಸ್ತೆಗಳಲ್ಲಿ ರಸ್ತೆಗಳನ್ನು ವಿಸ್ತರಿಸುವುದು ಮತ್ತು ಚರಂಡಿ ನಿರ್ಮಾಣ ಮಾಡುತ್ತಿದ್ದು ಹಾಲಿ ಇರುವ ವಿದ್ಯುತ್ ಕಂಬಗಳನ್ನು ಸಾರ್ವಜನಿಕರು ಮತ್ತು ಸಾರ್ವಜನಿಕ ಸಂಚಾರಕ್ಕೆ ರಸ್ತೆ ಬದಿಗೆ ಸ್ಥಳಾಂತರಿಸಿಕೊಡುವಂತೆ ಹಾಗೂ ಕೆಲವು ರಸ್ತೆಗಳಲ್ಲಿ ವಿದ್ಯುತ್ ಕಂಬಗಳಿಲ್ಲದೇ ಬೀದಿ ದೀಪದ ವ್ಯವಸ್ಥೆ ಮಾಡಲು ಮತ್ತು ಅಗತ್ಯವಿರುವ ಕಡೆ ಹೊಸ ವಿದ್ಯುತ್ ಕಂಬವನ್ನು ಅಳವಡಿಸಲು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:28(9):–** ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(10):–** ಮಂಡ್ಯ ನಗರ ಹಾಲಹಳ್ಳಿ ಹರಿಜನ ಕಾಲೋನಿ ಬಡಾವಣೆಯ ರಸ್ತೆಯನ್ನು ಹನಿಯಂಬಾಡಿ ರಸ್ತೆಗೆ ಸಂಪರ್ಕ ಕಲ್ಪಿಸಲು ಮಾನ್ಯ ಶಾಸಕರು ಹಾಗೂ ಅಂಬೇಡ್ಕರ್ ಯುವಕ ಸಂಘ, ಹಾಲಹಳ್ಳಿ ಮತ್ತು ಸಾರ್ವಜನಿಕರು ಕೋರಿರುವ ಬಗ್ಗೆ ಮಂಡ್ಯ ಸರ್ವೆ ನಂಬರ್:54/6ಸಿ ರಲ್ಲಿ ಶ್ರೀಮತಿ:ನಾಗಮ್ಮ ಕೋಂ.ದೊಡ್ಡಲಿಂಗೇಗೌಡರವರ ಬಾಬ್ತು ರಸ್ತೆಗಾಗಿ 219'X13'ಅಡಿಗಳು ಮತ್ತು ಮಂಡ್ಯ ಸರ್ವೆ ನಂಬರ್ 54/6ಬಿ4 ರಲ್ಲಿ ಶ್ರೀ.ನಿಂಗಯ್ಯ ಬಿನ್ ಕರೀಗೌಡರ ಬಾಬ್ತು ರಸ್ತೆಗಾಗಿ 290'X13'ಅಡಿಗಳನ್ನು ಸಾರ್ವಜನಿಕ ರಸ್ತೆಗಾಗಿ ಉಪಯೋಗಿಸಿಕೊಂಡು ಸದರಿಯವರಿಗೆ ಈಗಿನ ಮಾರುಕಟ್ಟೆ ದರವನ್ನು ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ: 28(10):–** ಒಪ್ಪಲಾಯಿತು.

**ವಿಷಯ: 28(11):** ಸದಸ್ಯರಾದ ಶ್ರೀ.ಹೊನ್ನಪ್ಪರವರು ಕಲ್ಲಹಳ್ಳಿ ಸ್ಕೂಲ್ ಮುಂಭಾಗದಲ್ಲಿರುವ ಟ್ರಾನ್ಸ್‌ಫಾರ್ಮರ್ ಅನ್ನು ಸ್ಥಳಾಂತರಿಸಲು ಕೋರಿರುವ ವಿಚಾರ.

**ತೀರ್ಮಾನ:28(11):–** ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸಲು ಸೆಸ್ಕಾಂರವರಿಗೆ ಪತ್ರ ಬರೆದು ಶಿಫ್ಟಿಂಗ್ ಶುಲ್ಕ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(12):–** ಸದಸ್ಯರಾದ ಶ್ರೀ.ಹೊನ್ನಪ್ಪರವರು ವಾರ್ಡ್ ನಂಬರ್:6ರಲ್ಲಿ ರಾಮಮಂದಿರದ ಮುಂಭಾಗದಲ್ಲಿರುವ ಹಳೇ ನೀರಿನ ತೊಂಬೆಯಲ್ಲಿ ನೀರು ಸರಬರಾಜು ನಿಂತು ಹೋಗಿದ್ದು ಅದನ್ನು ಸರಿಪಡಿಸಿ ಚಾಲನೆಗೆ ನೀಡುವುದೆಂದು ಕೋರಿರುವ ವಿಚಾರ.

**ತೀರ್ಮಾನ:28(12):–** ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳಿಗೆ ಪತ್ರ ಬರೆದು ನೀರಿನ ತೊಂಬೆಯಿಂದ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(13):**–ಸದಸ್ಯರಾದ ಶ್ರೀ.ಎನ್.ನಂಜುಂಡಯ್ಯರವರು ವಾರ್ಡ್ ನಂಬರ್:3ರಲ್ಲಿ ರಸ್ತೆ ಮಧ್ಯದಲ್ಲಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕೋರಿರುವ ವಿಚಾರ.

**ತೀರ್ಮಾನ:28(13):** ವಿದ್ಯುತ್ ಕಂಬ ಸ್ಥಳಾಂತರಿಸಲು ಸೆಸ್ಕಾಂರವರಿಗೆ ಪತ್ರ ಬರೆದು ಶಿಫ್ಟಿಂಗ್ ಶುಲ್ಕ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(14):–** ಸದಸ್ಯರಾದ ಶ್ರೀ.ಎಸ್.ಕೆ.ಶಿವಪ್ರಕಾಶ್ ಬಾಬುರವರು ವಾರ್ಡ್ ನಂಬರ್:19ರಲ್ಲಿ ಡಾಫೋಡಿಲ್ಸ್ ಸ್ಕೂಲ್ ಮುಂಬಾಗವಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕೋರಿರುವ ಬಗ್ಗೆ.

**ತೀರ್ಮಾನ:28(14):** ವಿದ್ಯುತ್ ಕಂಬ ಸ್ಥಳಾಂತರಿಸಲು ಸೆಸ್ಕಾಂರವರಿಗೆ ಪತ್ರ ಬರೆದು ಶಿಫ್ಟಿಂಗ್ ಶುಲ್ಕ ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(15):** ನಗರಸಭೆ ಟೆಂಡರ್ ಪ್ರಕಟಣೆ ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/41/2007–08 ದಿನಾಂಕ:1–1–2008, 10–2–2008 ಮತ್ತು ದಿನಾಂಕ:22–7–2008ರ ಕಾಮಗಾರಿಗಳ ಟೆಂಡರ್‌ನ್ನು ಅನುಮೋದನೆ ನೀಡುವ ವಿಚಾರ.

**ತೀರ್ಮಾನ:28(15):–** ಎಸ್.ಆರ್.ದರದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಲಾಯಿತು.

**ವಿಷಯ:28(16):–** ಮಂಡ್ಯ ನಗರದ ವಿ.ವಿ.ನಗರ ಬಡಾವಣೆಯಲ್ಲಿ 5ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕಾಗಿ ನಗರಸಭೆಯು ನೀರು ಸರಬರಾಜು ಮಂಡಳಿಗೆ ನೀಡಿದ ಸ್ಥಳದಲ್ಲಿ ಮಂಡಳಿಯು ಕಾಮಗಾರಿ ಪ್ರಾರಂಭಿಸಿದಾಗ ಸ್ಥಳದ ತಕರಾರಿನಿಂದ ಸದರಿ ಜಮೀನಿನ ಹಿಂದಿನ ಮಾಲೀಕರಾದ ಶ್ರೀ.ಕೆ.ಎಸ್.ರಾಜುರವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರಿಂದ ಕಾಮಗಾರಿಯನ್ನು ನಿಲ್ಲಿಸಲಾಗಿದೆ. ಈ ಯೋಜನೆಯಡಿಯಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿ.ವಿ.ನಗರದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿ ಮಾತ್ರ ಬಾಕಿ ಉಳಿದಿದ್ದು ಆದಷ್ಟು ಬೇಗನೆ ನ್ಯಾಯಾಲಯದಿಂದ ತಡೆಯಾಜ್ಞೆ ತೆರವುಗೊಳಿಸಿ ಟ್ಯಾಂಕ್ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವುದು ಅಥವಾ ಈ ಸ್ಥಳಕ್ಕೆ ಬದಲಾಗಿ ಬೇರೆ ಬದಲಿ ಸ್ಥಳವನ್ನು ಮಂಡಳಿಗೆ ವಹಿಸಿದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಇಲ್ಲವಾದಲ್ಲಿ ಸದರಿ ಟ್ಯಾಂಕ್ ಕಾಮಗಾರಿಯನ್ನು ಹೊರತುಪಡಿಸಿ, ಯೋಜನೆಯ ಕಾಮಗಾರಿಗಳು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಮಾಡಲಾಗುವುದು. ಇದು ಅತ್ಯಂತ ತುರ್ತು ವಿಷಯವಾದ್ದರಿಂದ ಅದನ್ನು ಬೇಗನೇ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ , ನಿರ್ವಹಣಾ ಉಪ ವಿಭಾಗ, ಮಂಡ್ಯರವರು ಒತ್ತಾಯಪಡಿಸಿ ಕೋರಿರುವ ವಿಚಾರ.

**ತೀರ್ಮಾನ:28(16):–** ವಿಷಯದ ಬಗ್ಗೆ ಚರ್ಚಿಸಿ, ಸದರಿ ಯೋಜನೆಯ ಅವಧಿ ಪೂರ್ಣಗೊಳ್ಳುತ್ತಿದ್ದು, ಟ್ಯಾಂಕ್ ನಿರ್ಮಾಣಕ್ಕಾಗಿ ಮಂಜೂರಾಗಿರುವ ಹಣ ಸರ್ಕಾರಕ್ಕೆ ವಾಪಸ್ಸು ಹೋಗುವುದರಿಂದ ವಿ.ವಿ.ನಗರದ ಓವರ್ ಹೆಡ್ ಟ್ಯಾಂಕ್ ನಿವೇಶನದ ಸಂಬಂಧ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದು ಅಥವಾ ಬದಲಿ ಜಾಗವನ್ನು ಟ್ಯಾಂಕ್ ನಿರ್ಮಾಣಕ್ಕಾಗಿ ಮಂಡಳಿಗೆ ನೀಡುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:28(17):–** ನಗರಸಭಾ ಕಛೇರಿಯ ದೈನಂದಿನ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಅಧ್ಯಕ್ಷರು, ಉಪಾಧ್ಯಕ್ಷರು, ನಗರಸಭಾ ಸದಸ್ಯರುಗಳು , ಪೌರಾಯುಕ್ತರ ಕೊಠಡಿ ಮತ್ತು ಸಿಬ್ಬಂದಿಗಳ ಕೊಠಡಿಗಳಿಗೆ ಆಂತರಿಕ ದೂರವಾಣಿ (ಇಂಟರ್‌ಕಾಂ) ಗಳನ್ನು ಅಳವಡಿಸಲು ಕೊಟೇಷನ್ ಕರೆಯಲಾಗಿದ್ದು ಬಂದಿರುವ ಮೂರು ಕೊಟೇಷನ್‌ಗಳಲ್ಲಿ ಸಹ್ಯಾದ್ರಿ ಟೆಲಿಕಾಂ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರುರವರು; ಕಡಿಮೆ ದರ ನಮೂದಿಸಿರುವುದರಿಂದ ಸದರಿಯವರ ದರವನ್ನು ಒಪ್ಪಿ ಅನುಮೋದಿಸಿ ಸದರಿಯವರಿಗೆ ಕಾರ್ಯಾದೇಶ ನೀಡುವುದರ ಬಗ್ಗೆ ಚರ್ಚಿಸಿ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:28(17):–** ಕಛೇರಿಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಆಂತರಿಕ ದೂರವಾಣಿ (ಇಂಟರ್‌ಕಾಂ) ಅಳವಡಿಸುವುದು ಅತ್ಯವಶ್ಯಕವಾಗಿರುವುದರಿಂದ ಆಂತರಿಕ ದೂರವಾಣಿ ವ್ಯವಸ್ಥೆ ಮಾಡಿಸಬಹುದೆಂದು ಮತ್ತು ಅತ್ಯಂತ ಕಡಿಮೆ ದರ ನಮೂದಿಸಿರುವುದರಿಂದ ಸದರಿಯವರ ದರವನ್ನು ಒಪ್ಪಿ ಕಛೇರಿಯಿಂದ ಕಾರ್ಯಾದೇಶ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

<u>**ವಿಷಯ**:28(18)</u>:– ನಗರಸಭೆ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಮತ್ತು ಶಾಸಕರ ಕೊಠಡಿ ಗಳಿಗೆ ಫ್ಲೋರಿಂಗ್ ಮಾಡಿಸುವ ವಿಚಾರ.

<u>**ತೀರ್ಮಾನ**:28(18):–</u> ವೆಟ್ರಿಫೈಡ್ ಟೈಲ್ಸ್ ಅನ್ನು ಅಳವಡಿಸಲು ತೀರ್ಮಾನಿಸಲಾಯಿತು.

ಸಹಿ:
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.